ಸೆಪ್ಟೆಂಬರ್ 2022, ಸಂಚಿಕೆ 3

*Magazine on Low External Input Sustainable Agriculture*
*Compilation of selected translated articles into Kannada*

ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿ ಕುರಿತ ಮ್ಯಾಗಜಿನ್.
ಕನ್ನಡಕ್ಕೆ ಅನುವಾದಿಸಿದ ಆಯ್ದ ಲೇಖನಗಳ ಸಂಕಲನ

# LEISA INDIA

# ಲೀಸಾ ಇಂಡಿಯ

## ವಿಶೇಷ ಕನ್ನಡ ಸಂಚಿಕೆ



# ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**

**ಸೆಪ್ಟೆಂಬರ್ 2022, ಸಂಚಿಕೆ 3**

ಈ ಸಂಚಿಕೆಯು 'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.



**ವಿಳಾಸ:** ಎ.ಎಂ.ಇ. ಪ್ರತಿಷ್ಠಾನ
ನಂ.204, 100 ಫೀಟ್ ರಿಂಗ್‌ರೋಡ್
ಮೂರನೇ ಫೇಸ್
ಬನಶಂಕರಿ ಎರಡನೇ ಬ್ಲಾಕ್
ಮೂರನೇ ಸ್ಟೇಜ್
ಬೆಂಗಳೂರು 560085
ದೂರವಾಣಿ+91-080-26699512/ 26699522
ಫ್ಯಾಕ್ಸ್ +91-080-26699410
ಈಮೈಲ್: leisaindia@yahoo.co.in



**ಲೀಸಾ ಇಂಡಿಯ**
'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯನ್ನು ಎ.ಎಂ.ಇ. ಪ್ರತಿಷ್ಠಾನ ಸಂಸ್ಥೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.



**ಸಂಪಾದಕೀಯ ಮಂಡಳಿ**
**ಮುಖ್ಯ ಸಂಪಾದಕಿ :** ಟಿ.ಎಂ.ರಾಧ
**ವ್ಯವಸ್ಥಾಪಕ ಸಂಪಾದಕ :** ಕೆ.ವಿ.ಎಸ್.ಪ್ರಸಾದ್

**ಕನ್ನಡ ಅನುವಾದ**
ಹೇಮಾ ಹೆಬ್ಬಗೋಡಿ

**ಕನ್ನಡ ಅನುವಾದಗಳ ಸಮನ್ವಯ**
ಬಿ. ಎಂ. ಸಂಜನಾ

**ಕಾರ್ಯ ನಿರ್ವಹಣೆ**
ರುಕ್ಮಿಣಿ ಜಿ.ಜಿ.

**ಪುಟ ವಿನ್ಯಾಸ**
ನಂದ ಕುಮಾರ್

**ಮುದ್ರಣ**
ಬ್ಲೂಸ್ಟ್ರೀಮ್ ಪ್ರಿಂಟಿಂಗ್, ಬೆಂಗಳೂರು

**ಮುಖಪುಟ ಚಿತ್ರ**
ಲಿಲ್ಲಿ ಮ್ಯಾಥ್ಯೂಸ್, ಯಶಸ್ವಿ ಹೈನುಗಾರಿಕೆ ಉದ್ಯಮಿ



## ಲೀಸಾ ಇಂಡಿಯ ಮ್ಯಾಗಜೀನ್

**ಇತರೆ ಪ್ರಾದೇಶಿಕ ಆವೃತ್ತಿಗಳು**
ಹಿಂದಿ, ಒರಿಯಾ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು



**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ, ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**



**ಮಿಸೆರಿಯೊರ್ ನೆರವಿನೊಂದಿಗೆ ಎ.ಎಂ.ಇ. ಪ್ರತಿಷ್ಠಾನದಿಂದ ಪ್ರಕಟಿತ.**


# ಪ್ರಿಯ ಓದುಗರೇ.

ಪ್ರಿಯ ಓದುಗರೇ,

ಲೀಸಾ ಇಂಡಿಯಾದ ಸೆಪ್ಟಂಬರ್ 2022ರ ಸಂಚಿಕೆಯನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಸಂತಸವಾಗುತ್ತಿದೆ. ಈ ಸಂಚಿಕೆಯು ಸಾವಯವ ಮಾರ್ಗದೆಡೆಗೆ ಪರಿವರ್ತನೆಗೊಳ್ಳಲು ಬಾಹ್ಯ ಸಂಸ್ಥೆಗಳ ನೆರವು, ಮೌಲ್ಯವರ್ಧನೆಯ ಪಾತ್ರ ಮತ್ತು ಕೆಲವು ಮಾದರಿ ಪ್ರಕರಣಗಳನ್ನು ಒಳಗೊಂಡಿದೆ.

ಕೌಶಲ್ಯ ನಿರ್ಮಾಣ ಮತ್ತು ಬಾಹ್ಯ ಸಂಸ್ಥೆಗಳ ನೆರವಿನಿಂದ ರೈತರು ಸಾವಯವ ಕೃಷಿಗೆ ಹೊರಳುವಂತೆ ಮಾಡುವಲ್ಲಿ ಬಹುದೂರದ ಹಾದಿಯನ್ನು ಕ್ರಮಿಸಬಹುದು. ಇದಕ್ಕೆ ಉದಾಹರಣೆ ತಮಿಳುನಾಡಿನ ಸೆಬಾಸ್ಟಿಯನ್.ರೈತ ಉದ್ಯಮಿಯಾದ ಜೈವಿಕ ಒಳಸುರಿಯುವಿಕೆಗಳ ಉತ್ಪಾದನೆಯಲ್ಲಿ ತೊಡಗಿಸಿಕೊಂಡದ್ದು ರೈತರು ಸಾವಯವ ಕೃಷಿ ವಿಧಾನಗಳತ್ತ ಪರಿವರ್ತನೆಯಾಗುವುದಕ್ಕೆ ನೆರವು ನೀಡುತ್ತಿದ್ದಾರೆ. ಅದೇ ರೀತಿ, ಮಹಾರಾಷ್ಟ್ರದ ರೈತ ಗುಂಪುಗಳು ಮತ್ತು ಮಹಿಳಾ ಸ್ವಸಹಾಯ ಸಂಘಗಳು ಜೈವಿಕ ಒಳಸುರಿಯುವಿಕೆಗಳಾದ ಜೈವಿಕ ಸಂಪದ್ಭರಿತ ಗೊಬ್ಬರ, ದಶಾಪರ್ಣಿ ಅರ್ಕ್, ಜೀವಾಮೃತ, ಪಂಚಗವ್ಯ ಇತ್ಯಾದಿಗಳ ಉತ್ಪಾದನೆಯಲ್ಲಿ ತರಬೇತಿ ಪಡೆದಿದ್ದಾರೆ.

ಕೋವಿಡ್‌ಸಾಂಕ್ರಾಮಿಕ ಸಂದರ್ಭದಲ್ಲಿ ಮೌಲ್ಯವರ್ಧಿತ ಉತ್ಪನ್ನಗಳು ರೈತರಿಗೆ ಹೆಚ್ಚುವರಿ ಆದಾಯವನ್ನು ದೊರಕಿಸಿಕೊಟ್ಟಿತು. ಇದರೊಂದಿಗೆ ಸ್ವಾವಲಂಬಿಗಳಾಗಿ ತಮ್ಮ ಹಳ್ಳಿಗಳಿಗೆ ಹಿಂತಿರುಗುವಂತೆ ಮಾಡಿದವು. ಮಧ್ಯಪ್ರದೇಶದ ಟಿಕಮ್‌ಗಢ್ ಜಿಲ್ಲೆಯ ಗ್ರಾಮವು ಮೌಲ್ಯವರ್ಧನೆಯ ಮೂಲಕ ಮಹುವಾ ಹೂವುಗಳು ಮತ್ತು ಹಣ್ಣುಗಳ ಹಲವಾರು ಉತ್ಪನ್ನಗಳನ್ನು ಉತ್ಪಾದಿಸಲು ಕಲಿಯಿತು. ಅದೇ ರೀತಿ, ಕೊಯ್ಲಿನ ನಂತರದ ನಷ್ಟವನ್ನು ಕಡಿಮೆ ಮಾಡಲು ಮತ್ತು ಉತ್ತಮ ಆದಾಯವನ್ನು ಸಾಧಿಸಲು ಅನೇಕ FPOಗಳಿಗೆ ಮೌಲ್ಯವರ್ಧನೆಯು ಉತ್ತಮ ತಂತ್ರವೆಂದು ಸಾಬೀತಾಗಿದೆ. ಮೌಲ್ಯವರ್ಧನೆಯನ್ನು ಉತ್ತೇಜಿಸುವ ರೈತರು, ಎಫ್‌ಪಿಒಗಳು ಮತ್ತು ಸಂಸ್ಥೆಯ ಇಂತಹ ಹಲವಾರು ಅನುಭವಗಳನ್ನು ಇಲ್ಲಿ ನಮೂದಿಸಲಾಗಿದೆ.

ಇದರಲ್ಲಿ ಎರಡು ಮಾದರಿ ಪ್ರಕರಣಗಳನ್ನು ಸೇರಿಸಲಾಗಿದೆ. ಕೇರಳದ ಕಂಜಿಕುಝಿ ಪ್ರದೇಶದಲ್ಲಿನ ಕುಟುಂಬಗಳನ್ನು ಮನೆಯಲ್ಲಿ, ಹಿತ್ತಲಿನಲ್ಲಿ ಮತ್ತು ಟೆರೇಸ್‌ಗಳಲ್ಲಿ ತರಕಾರಿಗಳನ್ನು ಬೆಳೆಯಲು ಆಹ್ವಾನಿಸಲಾಯಿತು. ಕಂಜಿಕುಝಿ ಇಡೀ ಪಂಚಾಯತ್‌ನಲ್ಲಿಯೇ ಸಾವಯವ ತರಕಾರಿ ಬೆಳೆದು ಮಾದರಿಯಾಯಿತು. ಅದೇ ರೀತಿ, ಲಿಲ್ಲಿ ಮ್ಯಾಥ್ಯೂಸ್‌ಪ್ರತಿಕೂಲ ಪರಿಸ್ಥಿತಿಯನ್ನೇ ಅವಕಾಶವಾಗಿ ಪರಿವರ್ತಿಸಿಕೊಂಡರು. ಡೈರಿ ಉದ್ಯಮವು ಆಕೆಯ ಬೆಳೆ ಪದ್ಧತಿಗಳಿಗೆ ಸುಸ್ಥಿರ ಆಧಾರವಾಗಿ ಬದಲಾಯಿತು.

ಈ ಸಂಚಿಕೆ ನಿಮಗೆ ಇಷ್ಟವಾಗುತ್ತದೆಯೆಂದು ಭಾವಿಸಿದ್ದೇವೆ. ನಿಮ್ಮ ಪ್ರತಿಕ್ರಿಯೆಗಳಿಗಾಗಿ ಕಾದಿರುತ್ತೇವೆ.

ಸಂಪಾದಕರು.

# ಲೀಸಾ LEISA

www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ. ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ - ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ - ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ. ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

# ಎ ಎಂ ಇ ಪ್ರತಿಷ್ಠಾನ

www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ, ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ಥಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.


**ವಿಶ್ವಸ್ಥರು**
**ಚೇರ್ಮನ್** : ಶ್ರೀ ಚಿರಂಜೀವಿ ಸಿಂಗ್, ಐ.ಎ.ಎಸ್. (ನಿ.,)
**ವೈಸ್ ಚೇರ್ಮನ್** : ಡಾ. ಸ್ಮಿತಾ ಪ್ರೇಮಚಂದರ್
**ಖಜಾಂಚಿ** : ಡಾ. ಎನ್.ಜಿ.ಹೆಗಡೆ,
**ಸದಸ್ಯರು** : ಶ್ರೀ ಅಶೋಕ್ ಚಟರ್ಜಿ, ಶ್ರೀಮತಿ ರೇಣುಕಾ ಚಿದಂಬರಂ
**ಕಾರ್ಯಕಾರಿ ನಿರ್ದೇಶಕರು:** ಶ್ರೀಮತಿ ಟಿ.ಎಂ.ರಾಧ


# ಮಿಸೆರಿಯೊರ್ MISEREOR

www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್-ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ




## ಕಂಜಿಕುಝಿ

### ಕೇರಳದ ಮೊದಲ ರಾಸಾಯನಿಕ ಮುಕ್ತ, ತರಕಾರಿ ಸ್ವಾಯತ್ತ ಪಂಚಾಯತ್

■ ತಾನ್ಯಾ ಅಬ್ರಹಾಂ

**4**

ಈ ಗ್ರಾಮವು 1994 ರಲ್ಲಿ ಸಾವಯವ ಕೃಷಿಯಲ್ಲಿ ತನ್ನ ಪ್ರಯೋಗಗಳನ್ನು ಪ್ರಾರಂಭಿಸಿತು. ಆಗ ಭಾರತದಲ್ಲಿ ಹೆಚ್ಚಿನವರಿಗೆ ಈ ಪರಿಕಲ್ಪನೆಯ ಬಗ್ಗೆ ತಿಳಿದಿರಲಿಲ್ಲ.



## ಸಂಯೋಜಿತ ಡೈರಿ ಕಡೆಗಿನ ಪಯಣ

■ ಅರ್ಚನಾ ಭಟ್, ರವೀಂದ್ರನ್ ಮತ್ತು ಅಬ್ದುಲ್ಲಾ ಹಬೀಬ್

**6**

ಪ್ರತಿಕೂಲ ಸಂದರ್ಭಗಳು ಅವಳಿಗೆ ಹೊಸ ಹೆಜ್ಜೆಯಿಡಲು ಪ್ರೇರೇಪಿಸಿದವು. ಹೊರಗಿನ ಸಂಸ್ಥೆಗಳಿಂದ ಆಕೆ ಪಡೆದ ತರಬೇತಿ ಮತ್ತು ಬೆಂಬಲ ಕನಸನ್ನು ನನಸಾಗಿಸಿಕೊಳ್ಳಲು ನೆರವು ನೀಡಿತು. ಲಿಲ್ಲಿ ಮ್ಯಾಥ್ಯೂಸ್ ಅವರದು ಹೀಗೆ ಪ್ರತಿಕೂಲ ಸಂದರ್ಭವನ್ನು ಅನುಕೂಲಕರ ಅವಕಾಶವಾಗಿ ಪರಿವರ್ತಿಸಿಕೊಂಡ ಸ್ಫೂರ್ತಿದಾಯಕ ಕತೆ. ಹೈನುಗಾರಿಕೆಯಲ್ಲಿ 25 ವರ್ಷಗಳನ್ನು ಪೂರೈಸಿದ್ದು ಆ ಪ್ರದೇಶದವರಿಗೆ ಮಾದರಿಯಾಗಿದ್ದಾರೆ.



## ಸಾಂಕ್ರಾಮಿಕ ಕಾಲದಲ್ಲಿ ಇಪ್ಪೆಯ ಮೌಲ್ಯವರ್ಧನೆ

■ ಯೋಗರಂಜನ್, ಲಲಿತ್ ಮೋಹನ್ ಬಾಲ್, ದಿನೇಶ್ ಕುಮಾರ್ ಮತ್ತು ಆಯುಷಿ ಸೋನಿ

**8**

ಇಪ್ಪೆಯ ಹೂಗಳು ಮತ್ತು ಹಣ್ಣುಗಳನ್ನು ವಿವೇಚನೆಯಿಂದ ವಾಣಿಜ್ಯ ಬಳಕೆ ಮಾಡಿದಲ್ಲಿ ಅದರ ಮೌಲ್ಯವರ್ಧನೆಯಾಗಿ ಹಳ್ಳಿಗೆ ಲಾಭದಾಯಕ ಉದ್ಯಮವಾಗಬಲ್ಲುದು. ಇಪ್ಪೆಯ ಹೂಗಳಿಂದ ಸ್ಯಾನಿಟೈಸರ್ ತಯಾರಿಸಬಹುದು ಎಂದು ಗ್ರಾಮಸ್ಥರು ತಿಳಿದುಕೊಂಡರು. ಇದು ಅವರನ್ನು ಸಾಂಕ್ರಾಮಿಕ ಸಮಯದಲ್ಲಿ ಸ್ವಾವಲಂಬಿಗಳನ್ನಾಗಿಸಿತು.



## ಸಾವಯವ ಕೃಷಿಯ ಉದ್ಯಮಶೀಲತೆಗೆ ಉತ್ತೇಜನ

■ ವಿಕ್ಟರ್ ಐ ಮತ್ತು ಸುರೇಶ ಕಣ್ಣ ಕೆ

**10**

ಮಳೆಯನ್ನು ಅವಲಂಭಿಸಿದ ರೈತರ ಪರಿಸ್ಥಿತಿ ಯಾವಾಗಲೂ ಸೂಕ್ಷ್ಮವಾಗಿರುತ್ತದೆ. ಈ ಬಿಕ್ಕಟ್ಟನ್ನು ಅವಕಾಶವಾಗಿ ಪರಿವರ್ತಿಸಿಕೊಳ್ಳುವಲ್ಲಿ ಬದ್ಧತೆಯೊಂದಿಗೆ ಹಲವರ ನೆರವು ಬೇಕಾಗುತ್ತದೆ. ಸೆಬಾಸ್ಟಿಯನ್ ಇದಕ್ಕೊಂದು ಉದಾಹರಣೆ. ಸಾವಯವ ಕೃಷಿ ಪದ್ಧತಿಗಳಿಗೆ ಬದಲಾಗಲು ರೈತರಿಗೆ ಮಾದರಿಯಾಗುವ ಮೂಲಕ ನೆರವು ನೀಡುತ್ತಿದ್ದಾರೆ.



## ಸಾವಯವ ಕೃಷಿಯೆಡೆಗೆ ಪರಿವರ್ತನೆ

■ ರೋಹನ್ ಯೋಗೇಶ್ ರಾವುತ್

**13**

ಕೃಷಿ ಎನ್ನುವುದು ಬದಲಾವಣೆ. ಹೊಸ ಸ್ಪರ್ಶ, ಹೊಸ ದೃಷಿಕೋನ ಮತ್ತು ಹೊಸ ಸವಾಲುಗಳೊಂದಿಗೆ ರಾಸಾಯನಿಕ ಕೃಷಿಯಿಂದ ಸಾಂಪ್ರದಾಯಿಕತೆಗೆ ಮರಳುವುದು. ಸಾವಯವ, ಪುನರುತ್ಪಾದಕ ಇಲ್ಲವೇ ಶೂನ್ಯ ಬಜೆಟ್ ಕೃಷಿಯಾಗಿರಲಿ ರೈತರಿಗೆ ಮುಖ್ಯವಾದದ್ದು ಅದು ನೀಡುವ ಆರ್ಥಿಕ ಹಾಗೂ ಪರಿಸರ ಸುಸ್ಥಿರತೆ.

## ಉತ್ತಮ ಆದಾಯಕ್ಕಾಗಿ ಮೌಲ್ಯವರ್ಧನೆ

■ ಅಯ್ಯಗಾರಿ ರಾಮಲಾಲ್, ದಂಡಪಾಣಿ ರಾಜು, ಮಧುಲಿಕಾ ಸಿಂಗ್, ಅಜಯ್ ಕುಮಾರ್ ಮತ್ತು ಅಂಬಿಕಾ ರಾಜೇಂದ್ರನ್

**16**

ರೈತ ಉತ್ಪಾದಕ ಸಂಸ್ಥೆಗಳು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಮ್ಮ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಲು ಸಹಾಯ ಮಾಡುವಲ್ಲಿ ಅಪಾರ ಸಾಮರ್ಥ್ಯವನ್ನು ಹೊಂದಿವೆ. ಮೌಲ್ಯವರ್ಧನೆಯಲ್ಲಿ ಈ ಸಂಸ್ಥೆಗಳ ಸಾಮರ್ಥ್ಯ ಹೆಚ್ಚಿದಲ್ಲಿ ಉತ್ಪನ್ನದ ಗುಣಮಟ್ಟ ಹೆಚ್ಚುತ್ತದೆ, ಮಾರಾಟದ ಸಾಮರ್ಥ್ಯ ಸುಧಾರಿಸುತ್ತದೆ, ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಮತ್ತು ಆದಾಯವನ್ನು ಒದಗಿಸುತ್ತದೆ.



## ಸಾವಯವ ಡ್ರ್ಯಾಗನ್ ಹಣ್ಣು ಕೃಷಿ

■ ಗೋಪಿ ಕರೆಲಿಯ

**18**

ಪಂಜಾಬಿನ ಹರ್ಬಂತ್‌ಸಿಂಗ್‌ಅವರು ಸಾಂಪ್ರದಾಯಿಕ ಬೆಳೆಗಳಿಗಿಂತ ಡ್ರ್ಯಾಗನ್‌ಹಣ್ಣು ಮತ್ತು ಗಂಧದ ಮರಕ್ಕೆ ಕಡಿಮೆ ನೀರಿನ ಅಗತ್ಯವಿದೆಯೆಂದು ಸಾವಯವ ಕೃಷಿಗೆ ಹೊರಳಿಕೊಂಡರು.

# ಕಂಜಿಕುಝಿ

## *ಕೇರಳದ ಮೊದಲ ರಾಸಾಯನಿಕ ಮುಕ್ತ, ತರಕಾರಿ ಸ್ವಾಯತ್ತ ಪಂಚಾಯತ್*

ತಾನ್ಯಾ ಅಬ್ರಹಾಂ

**ಈ ಗ್ರಾಮವು 1994 ರಲ್ಲಿ ಸಾವಯವ ಕೃಷಿಯಲ್ಲಿ ತನ್ನ ಪ್ರಯೋಗಗಳನ್ನು ಪ್ರಾರಂಭಿಸಿತು. ಆಗ ಭಾರತದಲ್ಲಿ ಹೆಚ್ಚಿನವರಿಗೆ ಈ ಪರಿಕಲ್ಪನೆಯ ಬಗ್ಗೆ ತಿಳಿದಿರಲಿಲ್ಲ.**

ಕೇರಳದ ಕರಾವಳಿ ಅಲಪ್ಪುಳ ಜಿಲ್ಲೆಯ ಕಂಜಿಕುಝಿ ಗ್ರಾಮದತ್ತ ಹೋಗುತ್ತಿದ್ದಂತೆ ಮರಳು, ಉಪ್ಪು ಮಿಶ್ರಿತ ಗಾಳಿ ಬೀಸತೊಡಗಿತು. ಹಳ್ಳಿಯೊಳಗೆ ಹೋಗುತ್ತಿದ್ದಂತೆ ತೋಟಗಳಿಂದ ಕಿತ್ತುತಂದ ತಾಜಾ ತರಕಾರಿಯ ಸುವಾಸನೆಯನ್ನು ಗಾಳಿ ಹೊತ್ತುತಂದಿತು.

ಭಾರತದ ಉಳಿದ ಭಾಗಗಳಿಗಿಂತ ಕಂಜಿಕುಝಿಯಲ್ಲಿ ವಿಭಿನ್ನವಾದ ಚಿತ್ರ ಕಂಡುಬರುತ್ತದೆ. ಹಳ್ಳಿಗಳಲ್ಲಿಯೂ ತರಕಾರಿಗಳು ವಿರಳವಾಗಿರುವ ಸಮುಯದಲ್ಲಿ, ಕಂಝಿಕುಜಿಯು ಸಾವಯುವಾಗಿ ಬೆಳೆದ ತರಕಾರಿಗಳಿಂದ ತುಂಬಿದೆ. ಕೇರಳದ ಏಕೈಕ ತರಕಾರಿ ಸ್ವಾಯತ್ತ ಪಂಚಾಯತ್ಆಗಿರುವ ಕಂಜಿಕುಝಿ ಮಾದರಿ ಅನುಕರಣೀಯವಾಗಿದೆ. ಈ ಗ್ರಾಮವು 1994 ರಲ್ಲಿ ಸಾವಯವ ಕೃಷಿಯಲ್ಲಿ ತನ್ನ ಪ್ರಯೋಗಗಳನ್ನು ಪ್ರಾರಂಭಿಸಿತು. ಆಗ ಭಾರತದಲ್ಲಿ ಹೆಚ್ಚಿನವರಿಗೆ ಈ ಪರಿಕಲ್ಪನೆಯ ಬಗ್ಗೆ ತಿಳಿದಿರಲಿಲ್ಲ.

ಇದೆಲ್ಲ ಆರಂಭವಾದದ್ದು ಹೇಗೆ? ಕಂಜಿಕುಝಿಯ ಮಣ್ಣು ಕೃಷಿಗೆ ಯೋಗ್ಯವಲ್ಲವೆಂದು ಪರಿಗಣಿಸಲ್ಪಟ್ಟಿದ್ದರಿಂದ ಅವರು ತರಕಾರಿಗಾಗಿ ಕೇರಳದ ಇತರ ಭಾಗಗಳ ಮೇಲೆ ಅವಲಂಬಿತರಾದರು. ಇದು ತರಕಾರಿಗಳ ಬೆಲೆಯನ್ನು ಹೆಚ್ಚಿಸಿತು. ಎಲ್ಲಕ್ಕಿಂತ ಹೆಚ್ಚಾಗಿ ಸ್ಥಳೀಯ ಉದ್ಯಮಗಳಿಂದ (ಮುಖ್ಯವಾಗಿ ತೆಂಗು) ಗ್ರಾಮಸ್ಥರಿಗೆ ದೊರಕುತ್ತಿದ್ದ ಆದಾಯ ಕಡಿಮೆಯಾಗಿತ್ತು. ಆದ್ದರಿಂದ, ಆಗಿನ ಪಂಚಾಯತ್ ಮುಖ್ಯಸ್ಥರು ಕ್ರಾಂತಿಗೆ ಕರೆ ನೀಡಿದರು: ಹಳ್ಳಿಯ ರೈತ ಕುಟುಂಬಗಳು ಕೈಗೊಳ್ಳುವ ಸಾವಯವ ಕೃಷಿಯಲ್ಲಿ ಭವಿಷ್ಯವಿದೆ ಎಂದು ಅವರು ನಿರ್ಧರಿಸಿದರು. ''ತರಕಾರಿಯನ್ನು ಖರೀದಿಸದೆ ಇಲ್ಲೇ ಬೆಳೆಯುವಂತಾದದ್ದು ಮುಖ್ಯವಾಗಿತ್ತು'', ಎಂದು ಪಂಚಾಯತ್ ಅಧ್ಯಕ್ಷರಾದ ಎಂ.ಜಿ. ರಾಜು ಹೇಳುತ್ತಾರೆ.

ಹಳ್ಳಿಯಲ್ಲಿರುವ ರೈತರ ಅಂಗಡಿ



ಫೋಟೋ :

"ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಾಗ ಸವಾಲುಗಳು ಎದುರಾದವು. ಮಣ್ಣಿನ ಗುಣಮಟ್ಟ ಸರಿಯಿರಲಿಲ್ಲ ಅದರೊಂದಿಗೆ ಜನರಲ್ಲಿ ಸಾವಯವ ಕೃಷಿ ಕೈಗೊಳ್ಳುವಂತೆ ಅರಿವು ಮೂಡಿಸಬೇಕಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಈ ಯೋಜನೆಯನ್ನು ಮುಂದುವರೆಸಿಕೊಂಡು ಹೋಗಲು ವಾಸ್ತವಿಕವಾದ ಹಾಗೂ ಪರಿಣಾಮಕಾರಿ ವಿಧಾನವನ್ನು ರೂಪಿಸಬೇಕಿತ್ತು" ಎಂದು ಹೇಳಿದರು.

ಯೋಜನೆಯನ್ನು ರೂಪಿಸಿ, ಪಂಚಾಯತ್ ಸಮಿತಿಯು 8,600 ಕುಟುಂಬಗಳನ್ನು ಮನೆಯಲ್ಲಿ, ಹಿತ್ತಲಿನಲ್ಲಿ ಮತ್ತು ತಾರಸಿಗಳಲ್ಲಿ ಹಾಗಲಕಾಯಿ, ಕೆಂಪು ಪಾಲಕ, ಹೂಕೋಸು, ಹುರಳಿಕಾಯಿ ಇನ್ನಿತರ ತರಕಾರಿಗಳನ್ನು ಬೆಳೆಯಲು ಆಹ್ವಾನಿಸಿತು. ಲಭ್ಯವಿರುವ ಎಲ್ಲ ಸ್ಥಳವನ್ನು ಕೃಷಿಗೆ ಬಳಸುವ ಯೋಚನೆ ಮಾಡಿದ್ದರು. ಪಂಚಾಯತ್ ವತಿಯಿಂದ ಆರಂಭಿಕ ಧನಸಹಾಯವನ್ನು ನೀಡಲಾಯಿತು. "ಸುಸ್ಥಿರ ಅಭ್ಯಾಸವನ್ನು ರೂಪಿಸಲು, ಬೆಳೆಗಾರರನ್ನು ಮೇಲ್ವಿಚಾರಣೆ ಮಾಡಲು ಮತ್ತು ಪ್ರೋತ್ಸಾಹಿಸಲು ಕಾರ್ಷಿಕ ಕರ್ಮಸೇನಾ ಎಂಬ ಸಣ್ಣ ಸಮಿತಿಗೆ ತರಬೇತಿ ನೀಡಲಾಯಿತು. ಇದೊಂದು ಪ್ರಯಾಸಕರ ಪ್ರಕ್ರಿಯೆಯಾಗಿತ್ತು. ಆದರೆ ಅಂತಿಮವಾಗಿ ಮಣ್ಣಿನ pH ಸಮತೋಲನ ಮತ್ತು ಪೋಷಕಾಂಶಗಳ ಮಟ್ಟವನ್ನು ಪುನಃಸ್ಥಾಪಿಸಲಾಯಿತು. ಸಾವಯವ ಕೃಷಿಯನ್ನು ಬೆಂಬಲಿಸುವ ತಂತ್ರಗಳನ್ನು ಸ್ಥಳೀಯವಾಗಿ ಅಭಿವೃದ್ಧಿಪಡಿಸಿದಾಗ ಕೀಟ-ತಡೆಗಟ್ಟುವ ವಿಧಾನಗಳನ್ನು ಅಳವಡಿಸಿಕೊಳ್ಳಲಾಯಿತು", ಎಂದು ರಾಜು ವಿವರಿಸಿದರು.

## ರೈತರಿಗೆ ಚೆನ್ನಾಗಿ ತಿಳಿದಿದೆ

ಒಮ್ಮೆ ವ್ಯವಸ್ಥೆ ಜಾರಿಗೆ ಬಂದ ನಂತರ ಅದನ್ನು ಮುಂದುವರಿಸಿಕೊಂಡು ಹೋಗುವ ಜವಾಬ್ದಾರಿಯನ್ನು ಗ್ರಾಮಸ್ಥರಿಗೆ ವಹಿಸಲಾಯಿತು. ಆದ್ದರಿಂದ, ಇಂದಿಗೂ, ಪ್ರತಿ ಕುಟುಂಬವು ಗೊಬ್ಬರದ ಪ್ರಮಾಣ ಮತ್ತು ಕೀಟ ನಿಯಂತ್ರಣ ವಿಧಾನವನ್ನು ತಪ್ಪದೆ ಅನುಸರಿಸುತ್ತಿದೆ. "ತಮಗೆ ಯಾವುದು ಉತ್ತಮ ಎನ್ನುವುದು ರೈತರಿಗೆ ಚೆನ್ನಾಗಿ ಗೊತ್ತು. ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಅವರದನ್ನು ಕಲಿತಿದ್ದಾರೆ" ಎಂದು ರಾಜು ಹೇಳುತ್ತಾರೆ. ಕೃಷಿಯಲ್ಲಿ ಯಾವುದಾದರೂ ಆತ್ಯಂತಿಕ ನಿಯಮವಿದ್ದರೆ ಅದು ಕೃಷಿಯಲ್ಲಿ ರಾಸಾಯನಿಕಗಳನ್ನು ಬಳಸಬಾರದು ಎಂಬ ನಿಯಮ.

ಮಹಿಳಾ ಸ್ವಯಂ ಸೇವಾ ಸಂಸ್ಥೆಯಾದ ಕುಟುಂಬಶ್ರೀಯಿಂದ ಹಸಿರುಮನೆಗಳಲ್ಲಿ ಬೆಳೆದ ಬೀಜಗಳು ಮತ್ತು ಸಸಿಗಳನ್ನು ಪಂಚಾಯತ್ ಉಚಿತವಾಗಿ ನೀಡುತ್ತದೆ. "ಕಳೆದ ವರ್ಷ ನಾವು 50 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೀಡಿದ್ದೇವೆ. ಕಡಿಮೆ ವೆಚ್ಚದಲ್ಲಿ ಪರಿಸರ ಸ್ನೇಹಿ ಗೊಬ್ಬರ ತಯಾರಿಸುವ ಸೌಲಭ್ಯವನ್ನೂ ಒದಗಿಸುತ್ತೇವೆ," ಎನ್ನುತ್ತಾರೆ ರಾಜು.

ಇನ್ನುಮುಂದೆ ಕಂಜಿಕುಝಿಗೆ ಬೇರೆಡೆಯಿಂದ ತರಕಾರಿ ತರುವ ಅವಶ್ಯಕತೆಯಿಲ್ಲ. "ಮೊದಲು ಹಳ್ಳಿಗೆ ಬೇರೆಡೆಗಳಿಂದ ತರಕಾರಿಗಳನ್ನು ತರಲಾಗುತ್ತಿತ್ತು. ಈಗ ನಮ್ಮಲ್ಲೇ ಸಾವಯವ ವಿಧಾನದಲ್ಲಿ ಬೆಳೆದ ತಾಜಾ ತರಕಾರಿಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರುತ್ತೇವೆ," ಎನ್ನುತ್ತಾರೆ ರಾಜು. ತರಕಾರಿಗಳ ಪ್ರಮಾಣ ಹೆಚ್ಚಾದಾಗ ಹೆದ್ದಾರಿಯ ಬದಿಗಳಲ್ಲಿ ಅವುಗಳನ್ನು ಇಟ್ಟುಕೊಂಡು ಪ್ರಯಾಣಿಕರಿಗೆ ಮಾರಾಟ ಮಾಡಲಾಯಿತು. "ಒಂದು ಕಾಲದಲ್ಲಿ ನಾವು ಕೊಂಡುತರುತ್ತಿದ್ದ ನಗರಗಳಿಗೆ ನಮ್ಮ ತರಕಾರಿಗಳು ತಲುಪಲಾರಂಭಿಸಿದವು. ಕೈಗೆಟಕುವ ಬೆಲೆಯಲ್ಲಿ ಸಾವಯವ ಉತ್ಪನ್ನವನ್ನು ಒದಗಿಸುವ ಮೂಲಕ ನಾವು ಗ್ರಾಹಕರ ಹಣ ಮತ್ತು ಆರೋಗ್ಯ ಎರಡಕ್ಕೂ ಗಮನಕೊಟ್ಟಂತಾಯಿತು."

ಹಳ್ಳಿಯ ಬದುಕು ಬದಲಾಗಿದೆ. ತರಕಾರಿ ಕೃಷಿಯ ವರದಾನವಾಗಿ ಸಮೃದ್ಧಿಯನ್ನು ತಂದುಕೊಟ್ಟಿದೆ. ಕೆಲವು ಗ್ರಾಮಸ್ಥರು ತಿಂಗಳಿಗೆ ರೂ. 50,000 ಸಂಪಾದಿಸುತ್ತಿದ್ದಾರೆ. ಅವರು ವರ್ಷಪೂರ್ತಿ ಕೃಷಿ ಕೈಗೊಳ್ಳುತ್ತಿದ್ದಾರೆ. ಅವರು ಸಾವಯವ ಕೃಷಿಯ ಬಗ್ಗೆ ತರಗತಿಗಳನ್ನು ಸಹ ನೀಡುತ್ತಾರೆ; ಕೆಲವರು ಹೈಬ್ರಿಡ್ ತರಕಾರಿ ಪ್ರಭೇದಗಳನ್ನು ಸಹ ಅಭಿವೃದ್ಧಿಪಡಿಸಿದ್ದಾರೆ. ನಲವತ್ತೆಂಟು ವರ್ಷ ವಯಸ್ಸಿನ ಸುಭಕೇಶನ್ ಅವರು ಕಂಜಿಕುಝಿ ಹುರುಳಿಕಾಯಿ ಎಂದು ಕರೆಯಲ್ಪಡುವ ಸ್ಥಳೀಯ ಹೈಬ್ರಿಡ್ ಹುರುಳಿಕಾಯಿ ಬೀಜಗಳನ್ನು ಮಾರಾಟ ಮಾಡುವ ಮೂಲಕ ತಮ್ಮ ಕುಟುಂಬಕ್ಕೆ ನೆರವಾಗುತ್ತಿದ್ದಾರೆ. "ನಾನು 2% ಭೂಮಿಯಲ್ಲಿ ಕೃಷಿ ಮಾಡಲು ಪ್ರಾರಂಭಿಸಿದೆ – ಇದು ಈಗ 25% ಕ್ಕೆ ವಿಸ್ತರಿಸಿದೆ; ಕೃಷಿ ನನ್ನ ಜೀವನವನ್ನೇ ಬದಲಿಸಿದೆ' ಎಂದು ಅವರು ಹೇಳುತ್ತಾರೆ. ಮತ್ತೊಬ್ಬ ರೈತ 71 ವರ್ಷದ ಆನಂದನ್ ತಾನು ವರ್ಷವಿಡಿ ಕೃಷಿ ಮಾಡುತ್ತೇನೆ ಎನ್ನುತ್ತಾರೆ. ತಮ್ಮ 80% ಇಳುವರಿಗೆ ನಿಲ್ಲಿಸುವ ಉಪಾಯವನ್ನು ಹೀಗೆ ವಿವರಿಸುತ್ತಾರೆ : "ರೋಗ ಭಾದೆ ಆಗಲೇ ಶುರುವಾಗುವುದು. ಅದಕ್ಕೆ ನಾನು ಮೂರು ಸುತ್ತಿನಲ್ಲಿ ವರ್ಷಪೂರ್ತಿ ಕೃಷಿ ಮಾಡುತ್ತೇನೆ."

ಮುಂದಿನ ಪೀಳಿಗೆಯನ್ನು ತಯಾರು ಮಾಡಲು ಸ್ಥಳೀಯ ಶಾಲೆಗಳಲ್ಲಿ ಕೃಷಿಯ ಪಾಠಗಳನ್ನು ಕಡ್ಡಾಯಗೊಳಿಸಲಾಗಿದೆ. "ಮಣ್ಣು ಈಗ ಪೋಷಕಾಂಶಗಳಿಂದ ಸಮೃದ್ಧವಾಗಿದೆ. ನಮ್ಮ ಮಕ್ಕಳು ಆರೋಗ್ಯಕರ, ರಾಸಾಯನಿಕ ಮುಕ್ತ ಆಹಾರದೊಂದಿಗೆ ಬೆಳೆಯುತ್ತಾರೆ" ಎಂದು ಹಳ್ಳಿಯ ಪರವಾಗಿ ಮಾತನಾಡುವ ರಾಜು ಹೇಳುತ್ತಾರೆ. ಕಳೆದ ಆರ್ಥಿಕ ವರ್ಷದಲ್ಲಿ ಪಂಚಾಯತ್ ವಾರ್ಷಿಕ ₹14 ಕೋಟಿ ವಹಿವಾಟು ನಡೆಸಿತು. ಕಂಜಿಕುಜಿಯ ಉತ್ಪನ್ನವನ್ನು ಕೇರಳದಾದ್ಯಂತ ಬಳಸುತ್ತಿದ್ದಾರೆ. ಈ ಹಳ್ಳಿ ಈಗ ಕೇವಲ ಸಮುದ್ರ ತೀರದ ಹಳ್ಳಿಯಾಗಿ ಉಳಿದಿಲ್ಲ.

**ಈ ಲೇಖನವು ಮೂಲತಃ ಇಲ್ಲಿ ಪ್ರಕಟವಾಗಿದೆ :**

https://www.thehindu.com/sci-tech/agriculture/how-kanjikuzhi-village-in-alappuzha-became-the-first-chemical-free-vegetable-sufficient-panchayat-in-kerala/article28949494.ece

ಆಂಗ್ಲ ಮೂಲ :
ಲೀಸಾ ಇಂಡಿಯಾ; ಸಂಪುಟ 23, ಸಂಚಿಕೆ 3, ಸೆಪ್ಟಂಬರ್ 2021.

# ಸಂಯೋಜಿತ ಡೈರಿ ಕಡೆಗಿನ ಪಯಣ

**ಅರ್ಚನಾ ಭಟ್, ರವೀಂದ್ರನ್ ಮತ್ತು ಅಬ್ದುಲ್ಲಾ ಹಬೀಬ್**

**ಪ್ರತಿಕೂಲ ಸಂದರ್ಭಗಳು ಅವಳಿಗೆ ಹೊಸ ಹೆಜ್ಜೆಯಿಡಲು ಪ್ರೇರೇಪಿಸಿದವು. ಹೊರಗಿನ ಸಂಸ್ಥೆಗಳಿಂದ ಆಕೆ ಪಡೆದ ತರಬೇತಿ ಮತ್ತು ಬೆಂಬಲ ಕನಸನ್ನು ನನಸಾಗಿಸಿಕೊಳ್ಳಲು ನೆರವು ನೀಡಿತು. ಲಿಲ್ಲಿ ಮ್ಯಾಥ್ಯೂಸ್ ಅವರದು ಹೀಗೆ ಪ್ರತಿಕೂಲ ಸಂದರ್ಭವನ್ನು ಅನುಕೂಲಕರ ಅವಕಾಶವಾಗಿ ಪರಿವರ್ತಿಸಿಕೊಂಡ ಸ್ಫೂರ್ತಿದಾಯಕ ಕತೆ. ಹೈನುಗಾರಿಕೆಯಲ್ಲಿ 25 ವರ್ಷಗಳನ್ನು ಪೂರೈಸಿದ್ದು ಆ ಪ್ರದೇಶದವರಿಗೆ ಮಾದರಿಯಾಗಿದ್ದಾರೆ.**

ಬದುಕಿನಲ್ಲಿ ಏರುಪೇರುಗಳಾದಾಗ ಎದೆಗುಂದದೆ ಹೊಸ ಸವಾಲುಗಳನ್ನು ಸ್ವೀಕರಿಸಬಲ್ಲ ಕೆಲವೇ ಮಹಿಳೆಯರಲ್ಲಿ ಲಿಲ್ಲಿ ಮ್ಯಾಥ್ಯೂಸ್ ಕೂಡ ಒಬ್ಬರು. ಅವರ ಕುಟುಂಬವು ಮೆಣಸು ಕೃಷಿಯಲ್ಲಿ ನಷ್ಟವನ್ನು ಅನುಭವಿಸಿದಾಗ ಆಕೆ ಹೈನುಗಾರಿಕೆ ಮಾಡಿ ತಮ್ಮ ಕುಟುಂಬಕ್ಕೆ ನೆರವಾಗಲು ಮುಂದಾದರು. ಲಿಲ್ಲಿ ಮ್ಯಾಥ್ಯೂಸ್ ಕೇರಳದ ಮನಂತವಾಡಿಯ ವೈನಾಡಿನಲ್ಲಿ ನೆಲೆಸಿದ್ದಾರೆ. ಈಗ ಅವರ ಬಳಿ ಎಪ್ಪತ್ತು ಕ್ರಾಸ್‌ಬ್ರೀಡ್ ಹಸುಗಳಿದ್ದು ಹೈನುಗಾರಿಕೆಯನ್ನು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಕಠಿಣವಾದ ಹಾದಿಯನ್ನು ಕ್ರಮಿಸಿ, ಸವಾಲುಗಳನ್ನು ಎದುರಿಸಿ ಅವರು ತಮ್ಮ ಉದ್ಯಮವನ್ನು ಸ್ಥಾಪಿಸಿದ್ದಾರೆ.

ಹಿಂದೆ ಲಿಲ್ಲಿ ಮತ್ತವರ ಕುಟುಂಬವು ತಮ್ಮ ಒಂಬತ್ತು ಎಕರೆ ಭೂಮಿಯಲ್ಲಿ ಕಪ್ಪುಮೆಣಸು, ತೆಂಗು, ಕಾಫಿ, ಅಡಕೆ, ಗೋಡಂಬಿ ಮತ್ತು ತರಕಾರಿಗಳನ್ನು ಬೆಳೆಯುತ್ತಿದ್ದರು. ವಾರ್ಷಿಕವಾಗಿ 40 ಕ್ವಿಂಟಾಲ್ ಮೆಣಸನ್ನು ಬೆಳೆಯುತ್ತಿದ್ದರು. ಅದೇ ಅವರ ಆದಾಯದ ಪ್ರಮುಖ ಮೂಲವಾಗಿತ್ತು. ಇದರೊಂದಿಗೆ ತೆಂಗು, ಕಾಫಿ ಮತ್ತು ಅಡಕೆಯಿಂದ ಕೂಡ ಲಾಭ ಬರುತ್ತಿತ್ತು. ಸುಮಾರು ಇಪ್ಪತ್ತಾರು ವರ್ಷಗಳ ಹಿಂದೆ ಇಡೀ ವೈನಾಡಿನ ಮೆಣಸಿಗೆ ರೋಗದಸೋಂಕು ತಗುಲಿದಾಗ ಅವರ ಮೆಣಸಿನ ಗಿಡಗಳು ಹಾಳಾದವು. ಈಗಲೂ ಅವರು ಕರಿಮುಂಡ, ಪಣ್ಣಿಯಾರ್ –I ಮೆಣಸಿನ ತಳಿಗಳನ್ನು ಬೆಳೆಯುತ್ತಿದ್ದಾರೆ. ಅಂದು ಮೆಣಸಿನೊಂದಿಗೆ, ಅಡಿಕೆ, ತೆಂಗು ಗಿಡಗಳಿಗೂ ಸೋಂಕು ಹಬ್ಬಿ ಬಹಳ ನಷ್ಟವಾಗಿ ಆರ್ಥಿಕಹೊರೆ ಹೆಚ್ಚಿತು. ಲಿಲ್ಲಿ ಮ್ಯಾಥ್ಯೂಸ್ ಎದೆಗುಂದದೆ ಹೈನುಗಾರಿಕೆಯನ್ನು ಆರಂಭಿಸಿ ಕುಟುಂಬಕ್ಕೆ ನೆರವಾಗಲು ಮುಂದಾದರು. ಅವರ ತಂದೆತಾಯಿ ಹಸುಗಳನ್ನು ಸಾಕುತ್ತಿದ್ದರು. ಹಾಗಾಗಿ ಆ ಅನುಭವ ಆಕೆಗೆ ಈ ಉದ್ಯಮಕ್ಕೆ ಕಾಲಿಡಲು ಧೈರ್ಯ ಕೊಟ್ಟಿತು.

### ಡೈರಿಯ ಆರಂಭ

ಆರಂಭದಲ್ಲಿ ಕೊಯಂಬತ್ತೂರಿನಿಂದ ತಂದ 15 ಕ್ರಾಸ್‌ಬ್ರೀಡ್

**ಹಸುಗಳಿಗೆ ಜಮೀನಿನಲ್ಲಿ ಬೆಳೆದ ಉತ್ತಮ ಮೇವನ್ನು ಉಣಿಸಲಾಗುತ್ತದೆ.**



ತಳಿಗಳೊಂದಿಗೆ ಅವರು ತಮ್ಮ ಡೈರಿಯನ್ನು ಆರಂಭಿಸಿದರು. ಅವರ ಗಂಡ ಮ್ಯಾಥ್ಯೂಸ್ ಮಂತವಾಡಿಯ ಖಾಸಗಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ನಂತರ ಅವರು ಕೂಡ ಡೈರಿಕೃಷಿಗೆ ಕೈಜೋಡಿಸಿದರು. ಸೋಂಕಿಗೆ ಒಳಗಾಗಿದ್ದ ಕೆಲವು ಮರಗಳನ್ನು ಕಡಿದು ಆ ಜಾಗದಲ್ಲಿ ಮೇವಿನ ಹುಲ್ಲನ್ನು ಬೆಳೆಸಿದರು. ಅವರಿಗೆ ಡೈರಿ ಕೃಷಿಯಲ್ಲಿ ಅನುಭವವಿದ್ದರೂ ಅದನ್ನೊಂದು ಉದ್ಯಮವಾಗಿ ಆರಂಭಿಸುವುದು ಸವಾಲಾಗಿತ್ತು. ಡೈರಿ ಕೃಷಿಕಳಾಗಲು ಲಿಲ್ಲಿ ಹಲವಾರು ತರಬೇತಿಗಳಲ್ಲಿ ಭಾಗವಹಿಸಿದರು. ಆಕೆಯ ಪ್ರಯಾಣದಲ್ಲಿ ಸರ್ಕಾರಿ ಇಲಾಖೆಗಳು ಮತ್ತು ಇತರ ಸಂಸ್ಥೆಗಳ ಬೆಂಬಲವೂ ಸಿಕ್ಕಿತು. 2008 ರಲ್ಲಿ, ಅವರು ಪಶುಸಂಗೋಪನಾ ಇಲಾಖೆಯಿಂದ 10 ಹಸುಗಳು, ಹಾಲು ಕರೆಯುವ ಯಂತ್ರವನ್ನು ಖರೀದಿಸಲು, ಮೇವಿನ ಹುಲ್ಲು ನೆಡಲು ಮತ್ತು ಕೊಟ್ಟಿಗೆಯನ್ನು ವಿಸ್ತರಿಸಲು ಬೆಂಬಲವನ್ನು ಪಡೆದರು. ನಂತರ 2014 ರಲ್ಲಿ, ಈರೋಡ್ ಪಶು ಆಸ್ಪತ್ರೆ ಮತ್ತು ಪೂಕೋಡ್‌ನ ಪಶುವೈದ್ಯಕೀಯ ಕಾಲೇಜಿನಿಂದ ಜಾನುವಾರು ಸಾಕಣೆ ಮತ್ತು ಹಾಲಿನ ಉತ್ಪನ್ನಗಳ ಅಭಿವೃದ್ಧಿ ಕುರಿತು ತರಬೇತಿ ಪಡೆದರು. ಈ ಎಲ್ಲಾ ತರಬೇತಿಗಳು ಆಕೆಗೆ ಹೆಚ್ಚು ಆತ್ಮವಿಶ್ವಾಸವನ್ನು ಗಳಿಸಲು ಸಹಾಯ ಮಾಡಿತು. ತನಗೆ ಆಸಕ್ತಿಯಿದ್ದ ಹೈನುಗಾರಿಕೆಯಲ್ಲಿ ಮುಂದುವರೆಯಲು ಪ್ರೇರೆಪಿಸಿತು.

ಪ್ರಸ್ತುತ, ಅವರ ಫಾರಂನಲ್ಲಿ 70 ಕ್ರಾಸ್‌ಬ್ರೀಡ್ ಹಸುಗಳಿವೆ. ಕಳೆದ 10 ವರ್ಷಗಳಿಂದ, ಲಿಲ್ಲಿ ಅವರು ಡೈರಿ ನಿರ್ವಹಣೆಯಲ್ಲಿ ತಕ್ಕಮಟ್ಟಿಗೆ ತರಬೇತಿ ಪಡೆದ ಕೆಲವು ಕಾರ್ಮಿಕರ ಸಹಾಯದಿಂದ ಸ್ವಯಂಚಾಲಿತ ಹಾಲುಕರೆಯುವ ಯಂತ್ರಗಳ ಮೂಲಕ ಹಾಲು ಕರೆಯುತ್ತಾರೆ. ಎಲ್ಲಾ ಹಸುಗಳಿಗೆ ಗುಣಮಟ್ಟದ ಮೇವನ್ನು ಉಣಿಸಲಾಗುತ್ತದೆ. ಉತ್ತಮ ಮೇವುಗಳನ್ನು ಅವರ ಜಮೀನಿನಲ್ಲಿ ಬೆಳೆಸಲಾಗುತ್ತದೆ ಜೊತೆಗೆ ಮಿಶ್ರ ಪಡಿತರವನ್ನು ಅವರೇ ಸ್ವತಃ ವಿವಿಧ ಸಾಂದ್ರೀಕರಣ ಮತ್ತು ಆಹಾರಗಳ ಮೂಲಕ ನಿರ್ದಿಷ್ಟ ಅನುಪಾತದಲ್ಲಿ ತಯಾರಿಸುತ್ತಾರೆ. ವೈದ್ಯಕೀಯ ತುರ್ತುಪರಿಸ್ಥಿತಿ ಒದಗಿದಲ್ಲಿ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು ತಕ್ಷಣ ಅಗತ್ಯವಾದ ಬೆಂಬಲವನ್ನು ಒದಗಿಸುತ್ತಾರೆ ಎಂದು ಅವರು ಹೇಳಿದರು.

2018 ರಲ್ಲಿ, ಲಿಲ್ಲಿ ಹೊಸ ಮೈಲಿಗಲ್ಲನ್ನು ಸಾಧಿಸಿದರು. ಮೊಸರು, ತುಪ್ಪ, ಬೆಣ್ಣೆ, ಪನೀರ್, ಮಜ್ಜಿಗೆ ಇತ್ಯಾದಿಗಳನ್ನು ಒಳಗೊಂಡಂತೆ ಹಾಲಿನಿಂದ ವೈವಿಧ್ಯಮಯ ಉತ್ಪನ್ನಗಳನ್ನು ಉತ್ಪಾದಿಸಲು ಕೋಲ್ಡ್ ಸ್ಟೋರೇಜ್ ಸೌಲಭ್ಯದೊಂದಿಗೆ ತಮ್ಮ ಮನೆಯಲ್ಲಿಯೇ ಮೌಲ್ಯವರ್ಧಕ ಘಟಕವನ್ನು ಪ್ರಾರಂಭಿಸಿದರು. ಈ ಹಿಂದೆ ಹಾಲು ಸೊಸೈಟಿಯಲ್ಲಿ ಮಾರಾಟ ಮಾಡುವಾಗ ಪ್ರತಿ ಲೀಟರ್ ಹಾಲಿಗೆ ಕನಿಷ್ಠ ರೂ. 35 ಸಿಗುತ್ತಿತ್ತು. ಮೌಲ್ಯವರ್ಧಕ ಘಟಕ ಸ್ಥಾಪಿಸಿದ ನಂತರ ಪ್ರತಿ ಲೀಟರ್‌ಗೆ ರೂ. 55 ಗಳಿಸಲಾರಂಭಿಸಿದರು. ಇದು ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟದ ಮೂಲಕ ಪ್ರತಿ ತಿಂಗಳು ಸಾಕಷ್ಟು ಉತ್ತಮ ಆದಾಯವನ್ನು ಗಳಿಸಲು ಸಹಾಯ ಮಾಡಿತು. ಪ್ರಸ್ತುತ, ಅವರ ಫಾರಂ ದಿನಕ್ಕೆ ಸುಮಾರು 700 ಲೀಟರ್ ಹಾಲು ಉತ್ಪಾದಿಸುತ್ತದೆ. ಫಾರಂ ಅನ್ನು ಯಶಸ್ವಿಯಾಗಿ ಮತ್ತು ಲಾಭದಾಯಕವಾಗಿ ನಡೆಸಲು ಪ್ರತಿ ಹಸುವಿನಿಂದ ಕನಿಷ್ಠ 20 ಲೀಟರ್ ಹಾಲು ಸಿಗುವುದು ಅಗತ್ಯ. ಇಲ್ಲದಿದ್ದರೆ ಡೈರಿಯು ಹೆಚ್ಚಿನ ವೆಚ್ಚದಿಂದಾಗಿ ನಷ್ಟವನ್ನು ಅನುಭವಿಸಬಹುದೆಂದು ಅವರು ಹೇಳುತ್ತಾರೆ. ಅವರು ತಮ್ಮದೇ ಸಾರಿಗೆ ವಾಹನಗಳು ಮತ್ತು ಎರಡು ಅಂಗಡಿಗಳ ಮೂಲಕ "ಲಿಲ್ಲಿಸ್" ಎನ್ನುವ ಬ್ರಾಂಡ್ ಹೆಸರಿನೊಂದಿಗೆ ವಯನಾಡ್ ಮತ್ತು ಕಣ್ಣೂರು ಜಿಲ್ಲೆಗಳಾದ್ಯಂತ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ನೆರೆಹೊರೆಯವರು ಫಾರಂಗೆ ಭೇಟಿ ನೀಡಲು ಬರುವ ಸಂದರ್ಶಕರು ನೇರವಾಗಿ ಘಟಕದಿಂದ ಉತ್ಪನ್ನಗಳನ್ನು ಖರೀದಿಸಬಹುದು. ಹಸುಗಳ ಹೊರತಾಗಿ, ಕೋಳಿ, ಬಾತುಕೋಳಿ, ಹೆಬ್ಬಾತು ಇತ್ಯಾದಿಗಳನ್ನು ಸಹ ಸಾಕುತ್ತಿದ್ದಾರೆ. ಮುಂಬರುವ ದಿನಗಳಲ್ಲಿ ಕೆಲವು ಮೇಕೆಗಳನ್ನು ಸಾಕಲು ಯೋಜಿಸುತ್ತಿದ್ದಾರೆ.

## ಫಾರಂ ಒಗ್ಗೂಡಿಸುವಿಕೆ

ಲಿಲ್ಲಿ ಡೈರಿ ಕೃಷಿಯ ಯಶಸ್ಸಿನೊಂದಿಗೆ ಬೆಳೆ ಕೃಷಿಯನ್ನು ಪುನರುಜ್ಜೀವನಗೊಳಿಸಿಕೊಂಡರು. ಕಾಫಿ, ಮೆಣಸು, ತೆಂಗು ಇತ್ಯಾದಿಗಳೊಂದಿಗೆ ವಿವಿಧ ತರಕಾರಿಗಳನ್ನು ಕೂಡ ಬೆಳೆಯುತ್ತಿದ್ದಾರೆ. ಇಡೀ ತೋಟ ಸಾವಯವ ವಿಧಾನದಲ್ಲಿ ಮುನ್ನಡೆಯುತ್ತಿದೆ. ಗಂಜಲ ಮತ್ತು ಸಗಣಿಯನ್ನು ಸಂಗ್ರಹಿಸಿ ತೋಟಕ್ಕೆ ಸಾವಯವ ಗೊಬ್ಬರವಾಗಿ ಬಳಸಲಾಗುತ್ತಿದೆ. ಸಗಣಿಯ ಪುನರ್‌ಬಳಕೆಗೆ ಬಯೋಗ್ಯಾಸ್ ಪ್ಲಾಂಟ್ ನಿರ್ಮಾಣದ ಹಂತದಲ್ಲಿದೆ. ಗಂಜಲವನ್ನು ಕೀಟನಿಯಂತ್ರಕವಾಗಿ ಬಳಸಲಾಗುತ್ತಿದೆ. ಜೊತೆಗೆ ಮಾರಾಟ ಕೂಡ ಮಾಡಲಾಗುತ್ತದೆ. ಮುಂಬರುವ ದಿನಗಳಲ್ಲಿ ಜೀವಾಮೃತ ತಯಾರಿಕಾ ಘಟಕವನ್ನು ಆರಂಭಿಸಲು ಯೋಜಿಸಿದ್ದಾರೆ. ಹಾಳಾದ ತಮ್ಮ ಮೆಣಸು ಬೆಳೆಯಲು ಪುನರುಜ್ಜೀವನಗೊಳಿಸುವುದರೊಂದಿಗೆ ಮೌಲ್ಯವರ್ಧಕ ಉತ್ಪನ್ನಗಳ ಮೂಲಕ ತಮ್ಮ ಉದ್ಯಮವನ್ನು ವಿಸ್ತರಿಸಿಕೊಂಡಿದ್ದಾರೆ.

ಮುಂದಿನ ವರ್ಷ ತಮ್ಮ ಫಾರಂನ ಬೆಳ್ಳಿಹಬ್ಬವನ್ನು ಆಚರಿಸಲು ಸಿದ್ಧರಾಗಿರುವ ಅವರು, ಹಸುಗಳ ಸಂಖ್ಯೆಯನ್ನು 90 ಕ್ಕೆ ಹೆಚ್ಚಿಸುವ ಮೂಲಕ ಹಾಲಿನ ಉತ್ಪಾದನೆಯನ್ನು ದಿನಕ್ಕೆ 1000 ಲೀಟರ್‌ಗೆ ಹೆಚ್ಚಿಸುವುದು ತಮ್ಮ ಕನಸು ಎಂದು ಹೆಮ್ಮೆಯಿಂದ ಹೇಳುತ್ತಾರೆ. ಈ ಉದ್ಯಮಕ್ಕೆ ಕಾಲಿಡಲು ಬಯಸುವ ಹೊಸಬರಿಗೆ ಉದ್ಯಮವನ್ನು ಸಣ್ಣಪ್ರಮಾಣದಲ್ಲಿ ಆರಂಭಿಸಿ ಎನ್ನುವುದು ಅವರು ಹೇಳುವ ಕಿವಿಮಾತು. ಜೊತೆಗೆ ತಮ್ಮ ಗುರಿ ಮುಟ್ಟಲು ಸೂಕ್ತ ತರಬೇತಿ ಪಡೆಯಬೇಕೆಂದು ಹೇಳುತ್ತಾರೆ. ತಮ್ಮ ಯಶಸ್ಸಿನಿಂದಾಗಿ, ಲಿಲ್ಲಿ ಮ್ಯಾಥ್ಯೂಸ್ ಈಗ ಇತರ ರೈತರು ಮತ್ತು ಸಲಹೆಗಾಗಿ ತನ್ನ ಫಾರಂಗೆ ಭೇಟಿ ನೀಡುವ ವಿದ್ಯಾರ್ಥಿಗಳಿಗೆ ಮಾನ್ಯತೆ ಪಡೆದ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ. ಅವರು ತಮ್ಮ ಸಾಧನೆಗಳಿಗಾಗಿ ಡೈರಿ ವುಮನ್ ಆಫ್ ದಿ ಇಯರ್ ಸೇರಿದಂತೆ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಹಲವಾರು ಪುರಸ್ಕಾರಗಳನ್ನು ಪಡೆದಿದ್ದಾರೆ. ಅವರು ತಮ್ಮ ತಿಳುವಳಿಕೆ ಮತ್ತು ಅನುಭವಗಳನ್ನು ಹಂಚಿಕೊಳ್ಳಲು ಮಾನಂತವಾಡಿಯ ದ್ವಾರಕಾದಲ್ಲಿ ರೇಡಿಯೋ ಮಟ್ಟೋಲಿಯಲ್ಲಿ ಪ್ರಮುಖ ಭಾಷಣಕಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಲಿಲ್ಲಿ ಸಾಂಪ್ರದಾಯಿಕ ಕೃಷಿ ಪದ್ಧತಿಯೊಂದಿಗೆ ಡೈರಿಯನ್ನು ಸಂಯೋಜಿಸುವುದರೊಂದಿಗೆ ತಮ್ಮ ಜೀವನ ಬದಲಾದದ್ದನ್ನು ತಮ್ಮ ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತ ಹೇಳುತ್ತಾರೆ. ಪಶುಸಂಗೋಪನೆಯನ್ನು ಸಾಂಪ್ರದಾಯಿಕ ಕೃಷಿ ಪದ್ಧತಿಯೊಂದಿಗೆ ಸಂಯೋಜಿಸಿದಾಗ ಬೆಳೆಯ ಆಧಾರಿತ ಕೃಷಿ ವ್ಯವಸ್ಥೆಯನ್ನು ಹೇಗೆ ಬದಲಿಸಬಹುದು ಎನ್ನುವುದಕ್ಕೆ ಆಕೆಯ ಪಯಣ ಉತ್ತಮ ಉದಾಹರಣೆ.

**Archana Bhatt**
Scientist
Community Agrobiodiversity Centre, MSSRF
Wayanad, Kerala
Email: archanabhatt1991@gmail.com

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 23, ಸಂಚಿಕೆ 4, ಡಿಸಂಬರ್ 2021.

# ಸಾಂಕ್ರಾಮಿಕ ಕಾಲದಲ್ಲಿ ಇಪ್ಪೆಯ ಮೌಲ್ಯವರ್ಧನೆ

**ಯೋಗರಂಜನ್, ಲಲಿತ್ ಮೊಹಲ್ ಬಾಲ್, ದಿನೇಶ್ ಕುಮಾರ್ ಮತ್ತು ಆಯುಷಿ ಸೋನಿ**

**ಇಪ್ಪೆಯ ಹೂಗಳು ಮತ್ತು ಹಣ್ಣುಗಳನ್ನು ವಿವೇಚನೆಯಿಂದ ವಾಣಿಜ್ಯ ಬಳಕೆ ಮಾಡಿದಲ್ಲಿ ಅದರ ಮೌಲ್ಯವರ್ಧನೆಯಾಗಿ ಹಳ್ಳಿಗೆ ಲಾಭದಾಯಕ ಉದ್ಯಮವಾಗಬಲ್ಲುದು. ಇಪ್ಪೆಯ ಹೂಗಳಿಂದ ಸ್ಯಾನಿಟೈಸರ್ ತಯಾರಿಸಬಹುದು ಎಂದು ಗ್ರಾಮಸ್ಥರು ತಿಳಿದುಕೊಂಡರು. ಇದು ಅವರನ್ನು ಸಾಂಕ್ರಾಮಿಕ ಸಮಯದಲ್ಲಿ ಸ್ವಾವಲಂಬಿಗಳನ್ನಾಗಿಸಿತು.**

ಮಧ್ಯಪ್ರದೇಶದ ಟಿಕಮ್‌ಗಢ್ ಜಿಲ್ಲೆಯ ಜನರು ಅರಣ್ಯಕ್ಕೆ ಸಮೀಪದಲ್ಲಿ ಸರಳವಾಗಿ ಬದುಕುತ್ತಿದ್ದಾರೆ. ಆದರೆ ಸುಸಜ್ಜಿತ ರಸ್ತೆಗಳ ಅತಿಕ್ರಮಣ ಮತ್ತು ನಗರೀಕರಣದ ಮಹತ್ವಾಕಾಂಕ್ಷೆಯು ಕೆಲವು ಅನಪೇಕ್ಷಿತ ಬದಲಾವಣೆಗಳಿಗೆ ಕಾರಣವಾಗಿದೆ. ಅರಣ್ಯ ಉತ್ಪನ್ನಗಳ ಅವಲಂಬನೆ ಇವರ ಸಾಂಪ್ರದಾಯಿಕ ಜೀವನೋಪಾಯವಾಗಿದೆ. ಗ್ರಾಮ ಜೀವನದಲ್ಲಾಗುತ್ತಿರುವ ಬದಲಾವಣೆಗಳಿಂದಾಗಿ ಇದು ತಪ್ಪಿಹೋಗಿ ಹೊಸ ಜೀವನಕ್ರಮಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ದೀರ್ಘಕಾಲಿಕ ಬರಗಾಲದಿಂದಾಗಿ ಹಳ್ಳಿಯಲ್ಲಿ ಜೀವನನಿರ್ವಹಣೆ ಕಷ್ಟವಾದ್ದರಿಂದ ಜನ ಕೆಲಸಕ್ಕಾಗಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ.

## ಅರಣ್ಯ ಪರಂಪರೆಯ ಪುನರುಜ್ಜೀವನ

ಜಿಲ್ಲೆಯ ವ್ಯಾಪ್ತಿಗೆ ಬರುವ ಸಂಪೂರ್ಣ ಪ್ರದೇಶವು ಅರಣ್ಯವನ್ನು ಒಳಗೊಂಡಿದೆ. ಅದು ಕೂಡ ಮಹುವ (ಮಧುಕಾ ಲಾಂಗಿಫೋಲಿಯಾ), ಪಲಾಸ್ (ಬ್ಯುಟಿಯಾ ಮೊನೊಸ್ಪರ್ಮಾ) ತೇಗ (ಟೆಕ್ಟೋನಾ ಗ್ರ್ಯಾಂಡಿಸ್) ಮತ್ತು ತೆಂದು (ಡಯೋಸ್ಪೈರೋಸ್ ಮೆಲನಾಕ್ಸಿಲಾನ್) ನಂತಹ ಆರ್ಥಿಕ ಮಹತ್ವ ಹೊಂದಿರುವ ಮರಗಳನ್ನು ಹೊಂದಿದೆ. ಇಪ್ಪೆ ಗ್ರಾಮಸ್ಥರ ಬಹುಮುಖ್ಯ ಆದಾಯ ಮೂಲವಾಗಿದೆ. ಸಾಂಪ್ರದಾಯಿಕವಾಗಿ ಇದು ಆಲ್ಕೊಹಾಲ್ ಮೂಲವಾಗಿದೆ. ತೆಂದು/ಬೀಡಿ ಎಲೆಗಳನ್ನು ಬೀಡಿ ತಯಾರಿಕೆಗೆ ಬಳಸಲಾಗುತ್ತದೆ.

"ಇಪ್ಪಿ ಹೂಗಳು, ಹಣ್ಣುಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದ್ದರೂ ಅವುಗಳ ಸಾಂಪ್ರದಾಯಿಕ ಸಂಗ್ರಹಣಾ ವಿಧಾನ, ಒಣಗಿಸುವಿಕೆ, ಸಂಗ್ರಹಣೆ ಇವೆಲ್ಲವೂ ಅವೈಜ್ಞಾನಿಕವಾಗಿದೆ", ಎಂದು ಕೃಷಿವಿಜ್ಞಾನಿ ಡಾ. ಎಲ್.ಎಂ. ಬಾಲ್ ಹೇಳುತ್ತಾರೆ. ಅವೈಜ್ಞಾನಿಕ ಶೇಖರಣೆಯಿಂದಾಗಿ ಅವುಗಳಲ್ಲಿ ಸೂಕ್ಷ್ಮಾಣುಗಳು ಹೆಚ್ಚಾಗಿ ಕೇವಲ ಸಾರಾಯಿ ಹಾಗೂ



**ಇಪ್ಪೆ ಆಧಾರಿತ ಆಲ್ಕೋಹಾಲ್**

ಜಾನುವಾರುಗಳ ಮೇವಿಗೆ ಸೂಕ್ತವಾಗಿದೆ ಎನ್ನುತ್ತಾರೆ. ಸಂಸ್ಕರಣ ಜ್ಞಾನದ ಕೊರತೆಯಿಂದಾಗಿ ಮಹುವಾ ಹೂವುಗಳ ಮಾರಾಟದಲ್ಲಿ ತೊಂದರೆ ಕಂಡುಬಂದಿದೆ. ಈ ಸಮಸ್ಯೆಗಳನ್ನು ಪರಿಹರಿಸಲು, ಮಧ್ಯಪ್ರದೇಶ ಸರ್ಕಾರದ ಜೀವವೈವಿಧ್ಯ ಮಂಡಳಿಯ ಆರ್ಥಿಕ ಬೆಂಬಲದೊಂದಿಗೆ ಟಿಕಮ್‌ಗಢ್‌ನಲ್ಲಿರುವ ಕೃಷಿ ಕಾಲೇಜು ಯೋಜನೆಯೊಂದನ್ನು ಕೈಗೆತ್ತಿಕೊಂಡಿತು. ಒಣಗಿದ ಇಪ್ಪೆ ಹೂಗಳ ಅಪೇಕ್ಷಿತ ಗುಣಮಟ್ಟವನ್ನು ಪಡೆಯಲು ಸೂಕ್ತರೀತಿಯಲ್ಲಿ ಒಣಗಿಸುವುದು (ಮೈಕ್ರೋವೇವ್ ಮತ್ತು ಸೌರ ಒಣಗಿಸುವಿಕೆ) ಮತ್ತು ಸಂರಕ್ಷಣಾ ವಿಧಾನಗಳನ್ನು ಪ್ರಮಾಣೀಕರಿಸಿತು.

ವಿವಿಧ ವಿಧಾನಗಳಿಂದ (ಸೌರ ಮತ್ತು ಮೈಕ್ರೊವೇವ್ ಒಣಗಿಸುವಿಕೆ) ಒಣಗಿಸುವ ಸಮಯದಲ್ಲಿ ಇಪ್ಪೆ ಹೂವುಗಳ ಹಲವಾರು ಗುಣಲಕ್ಷಣಗಳು, ಪರಿಣಾಮಕಾರಿ ತೇವಾಂಶ ಡಿಫ್ಯೂಸಿವಿಟಿ ಮತ್ತು ಬಣ್ಣದ ಚಲನಶಾಸ್ತ್ರವನ್ನು ಕಾಲೇಜಿನ ಸುಸಜ್ಜಿತ ಜೀವರಸಾಯನಶಾಸ್ತ್ರ ಪ್ರಯೋಗಾಲಯದಲ್ಲಿ ವ್ಯಾಪಕವಾಗಿ ಪರಿಶೋಧಿಸಲಾಯಿತು. ಒಣಗಿದ ಇಪ್ಪೆ ಹೂವುಗಳ ಭೌತ–ರಾಸಾಯನಿಕ ಗುಣಲಕ್ಷಣಗಳನ್ನು ಪ್ರಾಥಮಿಕವಾಗಿ ತೇವಾಂಶ, ಬಣ್ಣ ಮಾಪನ, ಪುನರ್ಜಲೀಕರಣ ಅನುಪಾತ ಮತ್ತು ಪ್ರೋಟೀನ್ ಮತ್ತು ಒಟ್ಟು ಸಕ್ಕರೆ ಅಂಶವನ್ನು ತಿಳಿಯಲು ಮೌಲ್ಯಮಾಪನ ಮಾಡಲಾಯಿತು. ಸ್ಥಳೀಯ ಖಾದ್ಯಗಳಾದ ಕಡುಬು, ಖೀರ್, ಪುರಿ ಮತ್ತು ಬರ್ಫಿಗಳನ್ನು ತಯಾರಿಸಲು ಈ ಹೂವುಗಳನ್ನು ನೈಸರ್ಗಿಕ ಸಿಹಿಕಾರಕಗಳಾಗಿ ಸುಲಭವಾಗಿ ಸಂಸ್ಕರಿಸಬಹುದು ಎಂದು ಈ ಎಲ್ಲಾ ಅಧ್ಯಯನಗಳು ಬಹಿರಂಗಪಡಿಸಿವೆ. ಈ ಹೂವುಗಳನ್ನು ಒಣಗಿದ ಹೂವು, ಕ್ಯಾಂಡಿಡ್ ಹೂವು, ಮಹುವಾ ಬಾರ್, ರೆಡಿ–ಟು–ಸರ್ವ್ ಪಾನೀಯಗಳು (ಆರ್‌ಟಿಎಸ್), ಸ್ಕ್ವಾಷ್, ಜಾಮ್, ಲಡ್ಡು, ಕೇಕ್ ಮತ್ತು ಟೋಫಿಯಂತಹ ವೈವಿಧ್ಯಮಯ ಆಹಾರ ಉತ್ಪನ್ನಗಳಾಗಿ ಪರಿವರ್ತಿಸುವುದನ್ನು ಗ್ರಾಮಸ್ಥರಿಗೆ ಪ್ರದರ್ಶಿಸಲಾಗಿದೆ. ಪ್ರಯೋಗಾಲಯದಲ್ಲಿ ಎರಡು ಸಲ ಬಟ್ಟಿ ಇಳಿಸುವಿಕೆಯ ಪ್ರಕ್ರಿಯೆಯಿಂದ ಆಲ್ಕೋಹಾಲ್ ಹೊರತೆಗೆಯಲಾಯಿತು. ಹೂವಿನಿಂದ ಹೊರಹೊಮ್ಮುವ ವಾಸನೆಯನ್ನು ತೆಗೆದುಹಾಕಲು ತುಳಸಿ ಎಲೆಗಳು, ನಿಂಬೆ ಹುಲ್ಲು ಮತ್ತು ಅಲೋವೆರಾದ ಸಾರಗಳನ್ನು ಬಳಸಲಾಯಿತು.

## ಕೋವಿಡ್ 19 – ಒಂದು ಅವಕಾಶವನ್ನು ತೆರೆದಿಟ್ಟಿತು

ಕರೋನಾ ಸಾಂಕ್ರಾಮಿಕ ಮತ್ತು ಲಾಕ್‌ಡೌನ್‌ನ ಅನಿವಾರ್ಯತೆಯು ಪ್ರದೇಶದ ವಲಸಿಗರನ್ನು ಮನೆಗೆ ಮರಳುವಂತೆ ಮಾಡಿತು. ಯಾವುದೇ ಆದಾಯದ ಮೂಲವಿಲ್ಲದೆ ಗ್ರಾಮಕ್ಕೆ ಮರಳಿದ ಇವರ ಸ್ಥಿತಿ ಶೋಚನೀಯವಾಗಿತ್ತು. ಇದರೊಂದಿಗೆ ಅತಿ ಸಣ್ಣ ಭೂ ಹಿಡುವಳಿ, ಕೃಷಿಯ ಕಡೆಗೆ ಯುವಕರ ತೀವ್ರ ನಿರಾಸಕ್ತಿ ಮತ್ತು ನೀರು ಮೊದಲಾದ ಸಂಪನ್ಮೂಲಗಳ ಕೊರತೆಯು ಸಮಸ್ಯೆಗಳನ್ನು ಉಲ್ಬಣಗೊಳಿಸಿತು.

ಗ್ರಾಮ ಪ್ರವಾಸದ ಸಮಯದಲ್ಲಿ, ಟೀಕಾಮ್‌ಗಢ್‌ನ ಕೃಷಿ ಕಾಲೇಜಿನ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳ ತಂಡವು ರಾಷ್ಟ್ರವ್ಯಾಪಿ ಸಾಂಕ್ರಾಮಿಕ ರೋಗ ಹರಡಿದ್ದರೂ, ಗ್ರಾಮಸ್ಥರು ಸ್ಯಾನಿಟೈಸರ್ ಬಳಕೆಯ ಬಗ್ಗೆ ತೀವ್ರ ಅಸಡ್ಡೆ ಹೊಂದಿದ್ದಾರೆ ಎಂದು ಗಮನಿಸಿದರು. ಅಷ್ಟೇ ಅಲ್ಲದೆ, ಹಿಂದಿರುಗಿದ ವಲಸಿಗರಲ್ಲಿ ಯಾವುದೇ ಆದಾಯದ ಮೂಲ ಲಭ್ಯವಿಲ್ಲದ ಕಾರಣ ಸಾಕಷ್ಟು ಹತಾಶೆಯೂ ಇತ್ತು. ಇಂತಹ ಕಷ್ಟದ ಸಮಯದಲ್ಲಿ, ಟಿಕಮ್‌ಗಢ್‌ನ ಕೃಷಿ ಕಾಲೇಜು, ಈ ವಲಸಿಗರಿಗೆ ಸ್ಥಳೀಯವಾಗಿ ಹೇರಳವಾಗಿ ಲಭ್ಯವಿರುವ ಇಪ್ಪೆಯ ಮೌಲ್ಯವರ್ಧನೆಯ ಮೂಲಕ ಜೀವನೋಪಾಯವನ್ನು ಗಳಿಸುವ ಉತ್ತಮ ಅವಕಾಶ ನೀಡಲು ಪ್ರಯತ್ನಿಸಿತು. ಕಾಲೇಜು ತಂಡವು ಸ್ಥಳೀಯರಿಗೆ ಆ ಪ್ರದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿರುವ ಇಪ್ಪೆ ಮರಗಳನ್ನು ಆದಾಯದ ಮೂಲವಾಗಿಸುವ ಕ್ರಮಗಳನ್ನು ಕೈಗೊಂಡಿತು. ಜೊತೆಗೆ ಆಲ್ಕೋಹಾಲ್ ಆಧಾರಿತ ಸ್ಯಾನಿಟೈಸರ್ ಬಳಸುವ ಅರಿವು ಮೂಡಿಸಿತು.

ಗ್ರಾಮಸ್ಥರಿಂದ ಒಟ್ಟು 300 ಕ್ವಿಂಟಾಲ್ ಇಪ್ಪೆಯನ್ನು ಖರೀದಿಸಲಾಗಿದ್ದು, ಇದುವರೆಗೆ ಸುಮಾರು 60 ಲೀಟರ್ ಇಪ್ಪೆ ಸ್ಯಾನಿಟೈಜರ್‌ಗಳನ್ನು ತಯಾರಿಸಿ ಗ್ರಾಮಸ್ಥರಿಗೆ ವಿತರಿಸಲಾಗಿದೆ. ಗ್ರಾಮೀಣ ಯುವಕರಿಗೆ 100ಮಿಲಿ ಸ್ಯಾನಿಟೈಸರ್ ಬಾಟಲಿಗಳನ್ನು ವಿತರಿಸಲಾಯಿತು. ಆರಂಭದಲ್ಲಿ, ದತ್ತು ಪಡೆದ ಹಳ್ಳಿಗಳ ಯುವಕರಿಗೆ ತರಬೇತಿಯ ಮೂಲಕ ಇಪ್ಪೆ ಆಧಾರಿತ ಆಹಾರ ಉತ್ಪನ್ನಗಳು ಮತ್ತು ಸ್ಯಾನಿಟೈಜರ್‌ಗಳ ಜನಪ್ರಿಯತೆ ಮತ್ತು ವಾಣಿಜ್ಯೀಕರಣವನ್ನು ತಿಳಿಸಲಾಯಿತು. ಪ್ರಯೋಗಾಲಯವು ಒಣಗಿದ ಇಪ್ಪೆಯ ಶೆಲ್ಫ್ ಜೀವಿತಾವಧಿಯನ್ನು ವಿಸ್ತರಿಸುತ್ತಿದೆ. ಹೀಗಾಗಿ ಇಪ್ಪೆಯ ಕೊಳೆಯುವ ಸಮಸ್ಯೆಯನ್ನು ನಿವಾರಿಸುತ್ತದೆ ಹಾಗೂ ವರ್ಷವಿಡೀ ಸಿಗುವಂತೆ ಮಾಡುತ್ತದೆ.

## ಪರಿಣಾಮ

ಹಳ್ಳಿಯ ಜನರು ಈಗ ಸ್ಯಾನಿಟೈಸರ್‌ನ ಮಹತ್ವವನ್ನು ಅರ್ಥಮಾಡಿಕೊಂಡಿದ್ದಾರೆ. ಇದನ್ನು ತಮ್ಮ ಸುತ್ತಲಿನ ವಸ್ತುಗಳಿಂದ ಮಾಡಲಾಗಿದೆ ಎಂದು ಅರಿತಿದ್ದಾರೆ. ಅನೇಕ ಗ್ರಾಮಸ್ಥರು ಇಪ್ಪೆ ಹೂವುಗಳನ್ನು ಮಾತ್ರವಲ್ಲದೆ ಗಿಲೋಯ್, ತುಳಸಿ ಮತ್ತು ಲೆಮನ್‌ಗ್ರಾಸ್ ಗಿಡಗಳನ್ನು ಮನೆಯ ಕುಂಡಗಳಲ್ಲಿ ಮತ್ತು ಕೈತೋಟಗಳಲ್ಲಿ ನೆಡಲು ಆಸಕ್ತಿಯನ್ನು ತೋರುತ್ತಿದ್ದಾರೆ. ಕರ್ಮೈರೈ ಗ್ರಾಮದ ಅಜಯ್ ಯಾದವ್, ಯೋಜನೆಯ ಸ್ವಯಂಸೇವಕರು. ಹಳ್ಳಿಯ ಜನರು ಬರ್ಫಿ ಮತ್ತು ಇಪ್ಪೆಯಿಂದ ಮಾಡಿದ ಮಿಠಾಯಿಗಳನ್ನು ಹೆಚ್ಚು ಇಷ್ಟಪಡುತ್ತಾರೆ ಎಂದು ಹೇಳುತ್ತಾರೆ. ಮಹಾನಗರಗಳಿಂದ ಹಿಂತಿರುಗಿದ ಯುವಕರು ಈಗ ಈ ಹೂವುಗಳು ಮತ್ತು ಹಣ್ಣುಗಳನ್ನು ಸಂಗ್ರಹಿಸಲು ಆಸಕ್ತಿ ತೋರುತ್ತಿದ್ದಾರೆ. ಕಾಲೇಜಿನ ಮಾರ್ಗದರ್ಶನದಲ್ಲಿ ಇಪ್ಪೆಯಿಂದ ಇತರ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲು ಕಲಿಯುತ್ತಿದ್ದಾರೆ. “ಸಾಂಕ್ರಾಮಿಕ ಪರಿಸ್ಥಿತಿ ಸುಧಾರಿಸಿದರೂ ಉದ್ಯೋಗಕ್ಕಾಗಿ ಮತ್ತೆ ದೊಡ್ಡ ನಗರಗಳಿಗೆ ಹೋಗುವ ಯಾವುದೇ ಯೋಜನೆ ನನಗಿಲ್ಲ”, ಎಂದು ದಯಾರಾಮ್ ಅಹಿರ್ವಾರ್ ಹೇಳುತ್ತಾರೆ. ಈ ಮೌಲ್ಯವರ್ಧಿತ ಉತ್ಪನ್ನಗಳು ಹೆಚ್ಚುವರಿ ಆದಾಯವನ್ನು ಒದಗಿಸುವುದರೊಂದಿಗೆ ರೈತರು ತಮ್ಮ ಹಳ್ಳಿಗಳಿಗೆ ಮರಳಲು ಮತ್ತು ಸಾಂಕ್ರಾಮಿಕ ಸಮಯದಲ್ಲಿ ಸ್ವಾವಲಂಬಿಗಳಾಗಿರಲು ಅನುವು ಮಾಡಿಕೊಟ್ಟಿವೆ.

**Yogranjan**
Scientist (Biotechnology)
E-mail: yogranjan@gmail.com

**Lalit Mohal Bal**
Scientist (Post Harvest Technology)
E-mail: lalit.bal@gmail.com

**Dinesh Kumar**
Scientist (Animal Nutrition)
E-mail: kr.dinesh7@gmail.com
College of Agriculture, Tikamgarh, M.P.-472001, India

**Ayushi Soni**
Research Scholar
College of Agriculture, Gwalior, M.P.- 474011, India
E-mail: ayushisoni2351997@gmail.com

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 23, ಸಂಚಿಕೆ 2, ಜೂನ್ 2021.

# ಸಾವಯವ ಕೃಷಿಯ ಉದ್ಯಮಶೀಲತೆಗೆ ಉತ್ತೇಜನ

**ವಿಕ್ಟರ್ ಐ ಮತ್ತು ಸುರೇಶ ಕಣ್ಣ ಕೆ**

**ಮಳೆಯನ್ನು ಅವಲಂಭಿಸಿದ ರೈತರ ಪರಿಸ್ಥಿತಿ ಯಾವಾಗಲೂ ಸೂಕ್ಷ್ಮವಾಗಿರುತ್ತದೆ. ಈ ಬಿಕ್ಕಟ್ಟನ್ನು ಅವಕಾಶವಾಗಿ ಪರಿವರ್ತಿಸಿಕೊಳ್ಳುವಲ್ಲಿ ಬದ್ಧತೆಯೊಂದಿಗೆ ಹಲವರ ನೆರವು ಬೇಕಾಗುತ್ತದೆ. ಸೆಬಾಸ್ಟಿಯನ್ ಇದಕ್ಕೊಂದು ಉದಾಹರಣೆ. ಸಾವಯವ ಕೃಷಿ ಪದ್ಧತಿಗಳಿಗೆ ಬದಲಾಗಲು ರೈತರಿಗೆ ಮಾದರಿಯಾಗುವ ಮೂಲಕ ನೆರವು ನೀಡುತ್ತಿದ್ದಾರೆ.**

ಸಾವಯವ ಕೃಷಿಯ ಉತ್ತೇಜನದಲ್ಲಿ ಸಾವಯವ ಅಥವಾ ಜೈವಿಕ ಒಳಸುರಿಯುವಿಕೆಗಳ ಬಳಕೆ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಸಾಂಪ್ರದಾಯಿಕ ಕೃಷಿಯಲ್ಲಿ, ರಾಸಾಯನಿಕ ಒಳಸುರಿಯುವಿಕೆಗಳು ಬೆಳೆಯನ್ನು ಪೋಷಿಸಲು ಮತ್ತು ರಕ್ಷಿಸಲು ನೇರವಾಗಿ ಪರಿಣಾಮ ಬೀರುತ್ತದೆಯೆಂದು ವ್ಯಾಪಕವಾಗಿ ಹೆಸರುವಾಸಿಯಾಗಿದೆ. ಇದಕ್ಕೆ ವಿರುದ್ಧವಾಗಿ, ಸಾವಯವ ಕೃಷಿಯಲ್ಲಿ, ಒಳಸುರಿಯುವಿಕೆಗಳನ್ನು ಮಣ್ಣನ್ನು ಪೋಷಿಸಲು ಮತ್ತು ಕೀಟಗಳನ್ನು ನಿಯಂತ್ರಣದಲ್ಲಿಡಲು ಬಳಸಲಾಗುತ್ತದೆ. ಈ ಪ್ರಯತ್ನದಲ್ಲಿ ಸಾವಯ ಕೃಷಿಗೆ ಹೊರಳಿಕೊಳ್ಳಬೇಕೆಂದು ಬಯಸುವ ರೈತರು ಎರಡು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮೊದಲನೆಯದು ಒಳಸುರಿಯುವಿಕೆಗಳ ಲಭ್ಯತೆ, ಎರಡನೆಯದು ಉತ್ಪನ್ನದ ಗುಣಮಟ್ಟ.

ಇತ್ತೀಚಿನ ವರ್ಷಗಳಲ್ಲಿ, ಕೆಲವು ನವೀನ ಉದ್ಯಮಶೀಲ ರೈತರು ಗುಣಮಟ್ಟದ ಜೈವಿಕ ಉತ್ಪನ್ನಗಳನ್ನು ಉತ್ಪಾದಿಸಲು ಸೂಕ್ತವಾದ ಉತ್ಪಾದನಾ ವಿಧಾನಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅವುಗಳನ್ನು ಇತರ ರೈತರಿಗೆ ಸಮಂಜಸವಾದ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡಿದ್ದಾರೆ. ಸಾವಯವ ಕೃಷಿಯ ಬಗ್ಗೆ ರೈತರಲ್ಲಿ ಹೆಚ್ಚುತ್ತಿರುವ ಅರಿವಿನ ಲಾಭವನ್ನು ಅವರು ಪಡೆದರು. ವಿವಿಧ ರೀತಿಯ ಸಾವಯವ ಹಾಗೂ ಜೈವಿಕ ಒಳಸುರಿಯುವಿಕೆಗಳನ್ನು ತಯಾರಿಸಿ ರೈತರಿಗೆ ಮಾರಾಟ ಮಾಡಲಾಗುತ್ತಿದೆ. ಸೆಬಾಸ್ಟಿಯನ್ ಅಂತಹ ರೈತ



**ಸೆಬಾಸ್ಟಿಯನ್ ಜೈವಿಕ ಗೊಬ್ಬರ ತಯಾರಿಕಾ ವಿಧಾನವನ್ನು ಸಂದರ್ಶಕರಿಗೆ ವಿವರಿಸುತ್ತಿರುವುದು**

ಉದ್ಯಮಿಗಳಲ್ಲಿ ಒಬ್ಬರು. ಅವರು ಸಾವಯವ ಒಳಸುರಿಯುವಿಕೆಗಳನ್ನು ಯಶಸ್ವಿಯಾಗಿ ಉತ್ಪಾದಿಸುತ್ತಿದ್ದು ಈ ಪ್ರದೇಶದಲ್ಲಿ ಇತರರಿಗೆ ಮಾದರಿಯಾಗಿದ್ದಾರೆ.

ಸೆಬಾಸ್ಟಿಯನ್ ತಮಿಳುನಾಡಿನ ತಿರುಚ್ಚಿ ಜಿಲ್ಲೆಯ ವೈಯಂಪಟ್ಟಿ ಬ್ಲಾಕ್‌ನಲ್ಲಿರುವ ಮುಗವನೂರ್ ಗ್ರಾಮದ ಸಣ್ಣ ರೈತ. ಅವರು ನಾಲ್ಕೂವರೆ ಎಕರೆ ಕೃಷಿ ಭೂಮಿ ಹೊಂದಿದ್ದು, ಎರಡೂವರೆ ಎಕರೆ ಮಳೆಯಾಶ್ರಿತ ಭೂಮಿಯಾಗಿದೆ. ಅವರು ಎರಡು ಎಕರೆ ಭೂಮಿಗೆ ಬಾವಿ ಹಾಗೂ ಕೊಳವೆಬಾವಿಯ ಮೂಲಕ ನೀರನ್ನು ಒದಗಿಸುತ್ತಿದ್ದಾರೆ. ಒಂದು ದಶಕಕ್ಕೂ ಹೆಚ್ಚು ಕಾಲ ಬರಗಾಲದ ಆವರ್ತಕ ವರ್ಷಗಳು ಕೃಷಿಗೆ ಸವಾಲೊಡ್ಡಿತ್ತು. ಆದ್ದರಿಂದ ಅವರು ಹೆಚ್ಚು ನೀರು ಬೇಡುವ ಭತ್ತದ ಕೃಷಿಯನ್ನು ಕಡಿಮೆಮಾಡಿ ಬಳ್ಳಿ ತರಕಾರಿಗಳಾದ ಹೀರೆಕಾಯಿ, ಪಡವಲ ಕಾಯಿ, ಹೀರೆಕಾಯಿ ಬೆಳೆಯಲು ಆರಂಭಿಸಿದರು. ಈ ಬಳ್ಳಿಗಳ ನೆರಳಲ್ಲಿ ಅವರು ಟೊಮೊಟೊ ಬೆಳೆಯುವ ಹೊಸ ಪದ್ಧತಿಯನ್ನು ಆರಂಭಿಸಿದರು. ಈ ವಿನೂತನ ಆವಿಷ್ಕಾರವನ್ನು ಪರಿಣಾಮಕಾರಿ ಎಂದು ಗುರುತಿಸಿ 2012ರಲ್ಲಿ ನಾರ್ವೆ ಮತ್ತು TNAUನ ಕ್ಲೈಮಾ ಅಡಾಪ್ಟ್ ಪ್ರೋಗ್ರಾಂನಲ್ಲಿ ಸೇರಿಸಲಾಗಿದೆ.

## ಸಾವಯವ ಕೃಷಿಯ ಪಯಣ

ತಮಿಳುನಾಡಿನ ಪ್ರಸಿದ್ಧ ಸಾವಯವ ಕೃಷಿ ಪ್ರತಿಪಾದಕರಾದ ದಿವಂಗತ ಶ್ರೀ ನಮ್ಮಾಳ್ವಾರ ಅವರು ಸ್ಥಾಪಿಸಿರುವ ವನಗಂ ಸಮೀಪವೇ ಇವರು ಇರುವುದು. 2013 ರಲ್ಲಿ, ಸುರುಮಾನ್‌ಪಟ್ಟಿ ಗ್ರಾಮದಲ್ಲಿ ವನಗಂನ ಪರಿಸರ ಫಾರ್ಮ್‌ನಲ್ಲಿ ನಡೆಸಿದ ಪರಿಸರ ಕೃಷಿಯ 5 ದಿನಗಳ ಕೋರ್ಸ್‌ನಲ್ಲಿ ಭಾಗವಹಿಸಿದ್ದರು. ಇದು ಕೃಷಿಯ ಕಡೆಗಿನ ಅವರ ದೃಷ್ಟಿಕೋನವನ್ನೇ ಬದಲಾಯಿಸಿತು.

ಸ್ಥಳೀಯ ಎನ್‌ಜಿಒ ಅಹಿಂಸಾ ಆಯೋಜಿಸಿದ್ದ ಸಮಗ್ರ ಕೀಟ ನಿರ್ವಹಣೆ ಕುರಿತ ತರಬೇತಿಯಲ್ಲೂ ಸೆಬಾಸ್ಟಿಯನ್ ಭಾಗವಹಿಸಿದ್ದರು. ಇದು AME (ಅಗ್ರಿಕಲ್ಚರ್ ಮ್ಯಾನ್ ಎಕಾಲಜಿ)ಯ ತಾಂತ್ರಿಕ ಮಾರ್ಗದರ್ಶನದೊಂದಿಗೆ 1990 ರ ದಶಕದ ಉತ್ತರಾರ್ಧದಲ್ಲಿ ತಮಿಳುನಾಡಿನಲ್ಲಿ IPM ವಿಧಾನಗಳನ್ನು ಕೈಗೆತ್ತಿಕೊಂಡ ಪ್ರವರ್ತಕ ಸಂಸ್ಥೆಗಳಲ್ಲಿ ಒಂದಾಗಿದ್ದು ವೈಯಂಪಟ್ಟಿ ಬ್ಲಾಕ್‌ನಲ್ಲಿ ಪರಿಸರ ಕೃಷಿಯ ಪ್ರಚಾರಕ್ಕಾಗಿ ಕೆಲಸ ಮಾಡುವುದನ್ನು ಮುಂದುವರೆಸಿದೆ. ನಂತರ, ಅವರು ನಬಾರ್ಡ್ ಮತ್ತು ಅಹಿಂಸದಿಂದ ಉಳವರ ಮಂದ್ರಂನ ಸಕ್ರಿಯ ಸದಸ್ಯರಾದರು. ವನಗಂ ಮತ್ತು ಅಹಿಂಸಾದ ಒಡನಾಟದಿಂದ ಉತ್ತೇಜಿತರಾದ ಸೆಬಾಸ್ಟಿಯನ್ ಸಾವಯವ ಕೃಷಿಯ ಕಡೆಗೆ ದೃಢವಿಶ್ವಾಸದಿಂದ ಮುಂದುವರೆದರು. ಅವರು ತಮ್ಮ ಜಮೀನಿನಲ್ಲಿ ಸಾವಯವ ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳಲು ಪ್ರಾರಂಭಿಸಿದರು. ಒಂದು ವರ್ಷದಲ್ಲಿ ಅವರು ತಮ್ಮ ಸಂಪೂರ್ಣ ನಾಲ್ಕೂವರೆ ಎಕರೆ ಪ್ರದೇಶದಲ್ಲಿ ಸಾವಯವ ವಿಧಾನಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡರು.

## ಸೃಜನಶೀಲತೆಗೆ ಒದಗಿದ ಬಿಕ್ಕಟ್ಟು

ಅವರ ನಂಬಿಕೆಗೆ ಸವಾಲೆಸೆಯುವಂತೆ ಸತತ ಬರಗಾಲ ಮತ್ತು ಒಣಹವೆಯು ಎದುರಾಯಿತು. ಇದು ಸಾವಯವ ಕೃಷಿಕನಾಗುವ ಅವರ ಕನಸನ್ನು ಭಗ್ನಗೊಳಿಸಿತು. ಸತತವಾಗಿ ಮಳೆಯ ಪ್ರಮಾಣ ಕಡಿಮೆಯಾದ್ದರಿಂದ ಮಳೆಯಾಶ್ರಿತ ಭೂಮಿಯಲ್ಲಿ ಕೃಷಿ ಕೈಗೊಳ್ಳಲು ಸಾಧ್ಯವಾಗಲಿಲ್ಲ. ಬಾವಿ ಹಾಗೂ ಕೊಳವೆಬಾವಿಗಳು ಬತ್ತಿದ್ದರಿಂದ ನೀರಾವರಿ ಕಷ್ಟಸಾಧ್ಯವಾಗಿ ಏನೂ ಬೆಳೆಯಲು ಸಾಧ್ಯವಾಗಲಿಲ್ಲ. ತರಕಾರಿಗಳನ್ನು ಉಳಿಸಿಕೊಳ್ಳಲು ಸೆಬಾಸ್ಟಿಯನ್ ನೀರನ್ನು ಹೊತ್ತುತಂದು ಗಿಡಗಳಿಗೆ ಉಣಿಸಬೇಕಾಯಿತು.

> ಜೈವಿಕ ಒಳಸುರಿಯುವಿಕೆಗಳನ್ನು ತಯಾರಿಸುವ ರೈತರಿಗೆ ಆರಂಭದಲ್ಲಿ ಮಾರುಕಟ್ಟೆಯ ಸವಾಲುಗಳನ್ನು ಎದುರಿಸಲು ಖರೀದಿ ಬೆಂಬಲದ ಅಗತ್ಯವಿದೆ.



ಸೆಬಾಸ್ಟಿಯನ್ ಕುಟುಂಬದ ಸದಸ್ಯರೆಲ್ಲರೂ ಜೈವಿಕ ಒಳಸುರಿಯುವಿಕೆಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿರುವರು

ಈ ಸಮಯದಲ್ಲಿ, ತಮಿಳುನಾಡು ಕೃಷಿ ವಿಶ್ವವಿದ್ಯಾನಿಲಯವು ಪುದುಕೊಟ್ಟೈ ಜಿಲ್ಲೆಯ ಕುಡುಮಿಯನ್ಮಲೈನಲ್ಲಿರುವ ಅಣ್ಣಾ ತೋಟಗಾರಿಕೆ ಫಾರ್ಮ್‌ನಲ್ಲಿ ಆಯೋಜಿಸಿದ್ದ ಎರಡು ದಿನಗಳ ತರಬೇತಿಯಲ್ಲಿ ಭಾಗವಹಿಸುವ ಅವಕಾಶವನ್ನು ಪಡೆದರು. ಈ ತರಬೇತಿಯು ಜೈವಿಕ ಒಳಸುರಿಯುವಿಕೆಗಳ ಉತ್ಪಾದನೆ ಹಾಗೂ ಮಾರಾಟದಿಂದ ಹೇಗೆ ರೈತರು ಬದಲಿ ಆದಾಯ ಗಳಿಸಬಹುದು ಎನ್ನುವುದರ ಕಡೆ ಗಮನಕೇಂದ್ರೀಕರಿಸಿತ್ತು. ತರಬೇತಿಯು ಅವರಿಗೆ ಜೈವಿಕ ಒಳಸುರಿಯುವಿಕೆಗಳ ಉತ್ಪಾದನಾ ಉದ್ಯಮಕ್ಕೆ ಮುಂದಾಗಲು ಒಳನೋಟಗಳನ್ನು, ಐಡಿಯಾಗಳನ್ನು ನೀಡಿತು ಇದನ್ನವರು ತಮ್ಮ ಕೃಷಿಬಿಕ್ಕಟ್ಟಿಗೆ ಪರಿಹಾರವಾಗಿ ಸ್ವೀಕರಿಸಿದರು. ಹೀಗಾಗಿ ಅವರು ಕೃಷಿಯಿಂದ ಜೈವಿಕ ಒಳಸುರಿಯುವಿಕೆಗಳ ಉತ್ಪಾದನೆ ಮತ್ತು ಮಾರ್ಕೆಟಿಂಗ್ ಕಡೆಗೆ ಗಮನಹರಿಸಿದರು.

"ನನ್ನ ಬಳಿ ಸಾವಯವ ಕೃಷಿ ಕೈಗೊಳ್ಳಲು ಸಾಕಾಗುವಷ್ಟು ಭೂಮಿಯಿದ್ದರೂ ನೀರಿನ ಅಭಾವದಿಂದ ಅದರಲ್ಲಿ 50%ಬೆಳೆಯನ್ನು ಮಾತ್ರ ಬೆಳೆಯಲು ಸಾಧ್ಯವಿತ್ತು. ಅದೇ ಸಮಯದಲ್ಲಿ ಸಾವಯವ ಕೃಷಿಯ ಕಡೆ ಆಸಕ್ತಿಯಿದ್ದ ಕೆಲವು ರೈತರು ತಮಗೆ ಜೈವಿಕ ಒಳಸುರಿಯುವಿಕೆಗಳನ್ನು ಉತ್ಪಾದಿಸಲು ಸಾಧ್ಯವಿಲ್ಲ ಎನ್ನುವ ಅಲವತ್ತು ತೋಡಿಕೊಂಡರು. ಹಾಗಾಗಿ ಅವುಗಳ ಉತ್ಪಾದನೆ ಮಾಡುವ ನಿರ್ಧಾರ ಕೈಗೊಂಡೆ. ಇದು ನನಗೊಂದು ಆದಾಯವನ್ನು ತಂದುಕೊಡುವುದರ ಜೊತೆಗೆ ಸಾವಯವ ಕೃಷಿ ಕಡೆಗೆ ಹೊರಳುತ್ತಿರುವ ರೈತರಿಗೆ ಸಹಾಯ ಮಾಡಿದ ಖುಷಿಯನ್ನು ಕೊಟ್ಟಿತು", ಎಂದು ಸೆಬಾಸ್ಟಿಯನ್ ಹೇಳುತ್ತಾರೆ.

## ಜೈವಿಕ ಒಳಸುರಿಯುವಿಕೆ ಉತ್ಪಾದನೆ ಮತ್ತು ಆದಾಯ

ಪ್ರಸ್ತುತ, ಅವರು ತಮ್ಮ ಜಮೀನಿನಲ್ಲಿ ಲಭ್ಯವಿರುವ ಕಚ್ಚಾ ವಸ್ತುಗಳ ಆಧಾರದ ಮೇಲೆ ದಸಗವ್ಯ, ಪಂಚಗವ್ಯ, ಫಿಶ್ ಅಮಿನೋ ಆಸಿಡ್, ಎರೆಹುಳು ಗೊಬ್ಬರ, ಗಿಡಮೂಲಿಕೆಗಳ ಕೀಟ ನಿವಾರಕ ಮಿಶ್ರಣದಂತಹ ಜೈವಿಕ ಒಳಸುರಿಯುವಿಕೆಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಜಾನುವಾರು ಹಾಗೂ ಬೆಳೆ ತ್ಯಾಜ್ಯಗಳನ್ನು ಕಚ್ಚಾವಸ್ತುಗಳಾಗಿ ಬಳಸಲಾಗುತ್ತಿದ್ದು ಸೀಮಿತ ವಸ್ತುಗಳನ್ನು ಮಾತ್ರ ಹೊರಗಿನಿಂದ ತರಲಾಗುತ್ತದೆ. ಅವರ ಬಳಿ ಎರಡು ದೇಸಿ ಹಸು (ಮಾನಪಾರೈ ಎನ್ನುವ ದೇಸಿ ತಳಿ) ಮತ್ತು ಒಂದು ಜರ್ಸಿ ಹಸು ಇದೆ. ದೇಸಿ ಹಸುಗಳ ಗಂಜಲ ಮತ್ತು ಸಗಣಿಯನ್ನು ಜೈವಿಕ ಒಳಸುರಿಯುವಿಕೆಗಳ ತಯಾರಿಕೆಗೆ ಬಳಸುತ್ತಾರೆ.

ಅವರ ಉದ್ಯಮಶೀಲ ಕೌಶಲ್ಯಗಳನ್ನು ಗಮನಿಸಿ ಕೃಷಿ ಇಲಾಖೆಯವರು ಎರಡು ಟನ್ ಸಾಮರ್ಥ್ಯದ ಎರೆಹುಳುಗೊಬ್ಬರದ ಗುಂಡಿಗಳನ್ನು ನಿರ್ಮಿಸಲು ನೆರವು ನೀಡಿದೆ. ಅದೇ ರೀತಿ ಅಹಿಂಸ ಹಾಗೂ ಸ್ಥಳೀಯ ಎನ್‌ಜಿಒಗಳು ಸಿಂಪಡಣೆಗಳೊಂದಿಗೆ ದಸಗವ್ಯ, ಪಂಚಗವ್ಯ, ಫಿಶ್ ಅಮಿನೊ ಆಸಿಡ್ ಮತ್ತು ಗಿಡಮೂಲಿಕೆಗಳ ಕೀಟನಾಶಕ ಮಿಶ್ರಣ ತಯಾರಿಕೆಗೆ ನೆರವು ನೀಡಿದೆ.
ಅವರ ಪತ್ನಿ, ಇಬ್ಬರು ಮಕ್ಕಳನ್ನು ಒಳಗೊಂಡಂತೆ ಇಡೀ ಕುಟುಂಬ ಇದರಲ್ಲಿ ತೊಡಗಿಕೊಂಡಿದೆ. ಅವರು ತಮ್ಮ ಇಬ್ಬರು ಮಕ್ಕಳಿಗೂ ಗಿಡಮೂಲಿಕೆಗಳನ್ನು ಗುರುತಿಸುವುದು, ಅವುಗಳ ಉಪಯೋಗದ ಕುರಿತು ತರಬೇತಿ ನೀಡಿದ್ದಾರೆ. ಗಿಡಮೂಲಿಕೆಗಳು ಮತ್ತು ಕಚ್ಚಾ ವಸ್ತುಗಳ ಸಂಗ್ರಹ, ಜೈವಿಕ ಒಳಸುರಿಯುವಿಕೆಗಳ ತಯಾರಿಕೆ, ನಿಯಮಿತ ಮೇಲ್ವಿಚಾರಣೆ, ನಿರ್ವಹಣೆ, ಮಾರ್ಕೆಟಿಂಗ್‌ನಲ್ಲಿ ಅವರನ್ನು ತೊಡಗಿಸಿಕೊಂಡಿದ್ದಾರೆ.

ತಮ್ಮ ಕೃಷಿ ಅಗತ್ಯಗಳನ್ನು ಪೂರೈಸಿದ ನಂತರ, ಪ್ರಸ್ತುತ ಸೆಬಾಸ್ಟಿಯನ್ ಅವರು ವಾರ್ಷಿಕವಾಗಿ 100 ಲೀಟರ್ ದಸಗವ್ಯ, 100 ಲೀಟರ್ ಪಂಚಗವ್ಯ, 20 ಲೀಟರ್ ಫಿಶ್ ಅಮಿನೋ ಆಸಿಡ್, 100 ಲೀಟರ್ ಗಿಡಮೂಲಿಕೆ ಕೀಟ ನಿವಾರಕ ಮಿಶ್ರಣ ಮತ್ತು 2000 ಕೆಜಿ ಎರೆಹುಳು ಗೊಬ್ಬರವನ್ನು ಮಾರಾಟ ಮಾಡುತ್ತಿದ್ದಾರೆ ಜೈವಿಕ ಒಳಸುರಿಯುವಿಕೆಗಳ ಮಾರಾಟದಿಂದ ವಾರ್ಷಿಕ ರೂ. 60000 ಗಳಿಸುತ್ತಿದ್ದಾರೆ. ಅವರ ಖರೀದಿದಾರರ ಪಟ್ಟಿಯಲ್ಲಿ ಸುಮಾರು 60–70 ರೈತರಿದ್ದಾರೆ. ಅವರಲ್ಲಿ 20 ಜನರು ನಿಯಮಿತ ಖರೀದಿದಾರರಾಗಿದ್ದಾರೆ.

ಬಹುತೇಕ, 90% ಜೈವಿಕ ಒಳಸುರಿಯುವಿಕೆಗಳನ್ನು ತಮ್ಮ ಫಾರಂ ಗೇಟ್‌ನಲ್ಲಿಯೇ ಮಾರಾಟ ಮಾಡುತ್ತಾರೆ. ಉಳಿದದ್ದನ್ನು ತಮ್ಮ ಫೋನ್ ಸಂಪರ್ಕದ ಮೂಲಕ ಮಾರುತ್ತಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಲು ಆರಂಭಿಸಿದ ನಂತರ ಇವರ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿದೆ. ಜೈವಿಕ ಒಳಸುರಿಯುವಿಕೆಗಳನ್ನು ತಯಾರಿಸಲು ಹಾಗೂ ಬಳಸಲು ಆಸಕ್ತಿ ಇರುವ ರೈತರಿಗೆ ಸಲಹೆಯನ್ನೂ ನೀಡುತ್ತಾರೆ.

## ಮಿನಿ ಲ್ಯಾಬ್

2018–19 ನೇ ಸಾಲಿನಲ್ಲಿ ಕೃಷಿ ಇಲಾಖೆಯು ರೈತರು ಒಟ್ಟಾಗಿ ಮಾಡಬಹುದಾದ ಕೆಲಸಗಳನ್ನು ಬಲಪಡಿಸಲು ಮತ್ತು ಅವರ ಉದ್ಯಮಶೀಲತಾ ಕೌಶಲ್ಯವನ್ನು ಹೆಚ್ಚಿಸಲು ರಾಜ್ಯ ಮಟ್ಟದ ತರಬೇತಿಯನ್ನು ಆಯೋಜಿಸಿದೆ. ಸೆಬಾಸ್ಟಿಯನ್ ಎಫ್‌ಪಿಒದ ಸದಸ್ಯರಾಗಿ ಉಳಿದ 70 ರೈತರೊಂದಿಗೆ ತರಬೇತಿಯಲ್ಲಿ ಭಾಗವಹಿಸಿದರು. ತರಬೇತಿಯ ನಂತರ, ಸೆಬಾಸ್ಟಿಯನ್ ಅವರು ಮೆಟಾರೈಜಿಯಂ ಅನಿಸೊಪ್ಲಿಯೇ ಎಂಬ ಶಿಲೀಂಧ್ರದ ಎಂಟೊಮೊಪಾಥೋಜೆನ್ ಉತ್ಪಾದನೆಯಲ್ಲಿ ಆಸಕ್ತಿಯನ್ನು ವ್ಯಕ್ತಪಡಿಸಿದರು. ಇದು ಮಣ್ಣಿನಲ್ಲಿ ವಾಸಿಸುವ ಕೀಟಗಳು ಮತ್ತು ಸಂಬಂಧಿತ ಬೇರು ಕೊಳೆಯುವ ಸಮಸ್ಯೆಗಳಿಗೆ ಜೈವಿಕ ನಿಯಂತ್ರಕ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತದೆ. ಅವರು ಕೃಷಿ ಇಲಾಖೆಯನ್ನು ಸಂಪರ್ಕಿಸಿ ಮಿನಿ ಲ್ಯಾಬ್ ಸ್ಥಾಪಿಸಲು ಹಾಗೂ ಮೆಟಾರೈಜಿಯಂ ಉತ್ಪಾದಿಸುವ ಆಸಕ್ತಿಯನ್ನು ವ್ಯಕ್ತಪಡಿಸಿದರು.

ಕೃಷಿ ಇಲಾಖೆಯ ಅಧಿಕಾರಿಗಳು ಅವರ ಸ್ಥಳಕ್ಕೆ ಕ್ಷೇತ್ರ ಭೇಟಿ ನೀಡಿ ತಮ್ಮ ಗುಂಪಿನ ಸದಸ್ಯರೊಂದಿಗೆ ಸಂವಾದ ನಡೆಸಿ ಮಿನಿ ಲ್ಯಾಬ್ ಸ್ಥಾಪನೆಗೆ ಯೋಜನೆಯನ್ನು ಅಂತಿಮಗೊಳಿಸಿದರು. ಲ್ಯಾಬ್ ಸ್ಥಾಪನೆಗೆ ಬೇಕಾದ ವಸ್ತುಗಳು ಅಂದರೆ ಟೇಬಲ್‌ಗಳು, ಪ್ರೆಶರ್ ಕುಕ್ಕರ್, ಯುವಿ ಲೈಟುಗಳು, ಬಕೇಟುಗಳು, ಕಂಟೈನರ್‌ಗಳನ್ನು ಕೊಳ್ಳಲು ಒಟ್ಟು ರೂ. 70,200 ನೀಡಿದರು. ಸೆಬಾಸ್ಟಿಯನ್ ಅವರು ವಾರ್ಷಿಕವಾಗಿ ಸುಮಾರು 50 ಕೆಜಿ ಮೆಟಾರೈಜಿಯಂ ಅನ್ನು ಉತ್ಪಾದಿಸುತ್ತಿದ್ದು ಸುಮಾರು ರೂ. 9000 ಗಳಿಸುತ್ತಿದ್ದಾರೆ.

ಹೀಗಿದ್ದೂ ಮಾರ್ಕೆಟಿಂಗ್ ಸವಾಲುಗಳಿವೆ. ಕೃಷಿ ಇಲಾಖೆಯು ನೇರವಾಗಿ ಮೆಟಾರೈಜಿಯಂ ಅನ್ನು ರೈತರಿಗೆ ಮಾರಾಟ ಮಾಡುತ್ತಿದ್ದು ಆಕರ್ಷಕ ಪ್ಯಾಕಿಂಗ್ ಮತ್ತು ಬ್ರಾಂಡ್ ಹೆಸರನ್ನು ಹೊಂದಿದೆ. ಸೆಬಾಸ್ಟಿಯನ್ ಅವರಂತಹ ರೈತರಿಗೆ ಇಲಾಖೆಯೇ ಪ್ರತಿಸ್ಪರ್ಧಿಯಾಗಿದೆ. ಇವರ ಉತ್ಪನ್ನಗಳು ಚೆನ್ನಾಗಿ ಪ್ಯಾಕ್ ಆಗಿರುವುದಿಲ್ಲ ಒಳ್ಳೆಯ ಹೆಸರು ಇರುವುದಿಲ್ಲ. ಈ ಮಾರ್ಕೆಟಿಂಗ್ ಸವಾಲನ್ನು ಜಯಿಸಲು ಸೆಬಾಸ್ಟಿಯನ್ ಖರೀದಿ ಬೆಂಬಲವನ್ನು ನಿರೀಕ್ಷಿಸಿದರು.

## ಉಪಸಂಹಾರ

ಸಾವಯವದ ಮೂಲಕ, ತಮ್ಮ ಮಣ್ಣಿನ ಆರೋಗ್ಯವನ್ನು ಸುಧಾರಿಸಿರುವುದನ್ನು ನೋಡಿ ಸೆಬಾಸ್ಟಿಯನ್ ಮತ್ತು ಇತರ ರೈತರು ಸಂತೋಷಗೊಂಡಿದ್ದಾರೆ. ಜೈವಿಕ ಒಳಸುರಿಯುವಿಕೆಗಳ ಬಳಕೆಯಿಂದಾಗಿ ಮಣ್ಣಿನ ಜೀವಜಗತ್ತು ಮರುಹೂರಣಗೊಳ್ಳುತ್ತದೆ. ಬೆಳೆ ಆರೋಗ್ಯ ಸುಧಾರಣೆಗೊಂಡು ಕೀಟಬಾಧೆ ಕಡಿಮೆಯಾಗಿ ಕುಟುಂಬಕ್ಕೆ ಸುರಕ್ಷಿತ, ಸ್ವಾದಿಷ್ಟ ಆಹಾರ ದೊರಕುತ್ತದೆ.

ಸೆಬಾಸ್ಟಿಯನ್ ಅವರ ಅನುಭವಗಳು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಯಿತು. ತಿರುಚನಾಪಳ್ಳಿಯ ವೆಲನ್ ಅರಂಗಂ ಎನ್ನುವ ಆಕಾಶವಾಣಿಯ ಕೃಷಿ ಕಾರ್ಯಕ್ರಮದಲ್ಲೂ ಪ್ರಸಾರವಾಯಿತು. ಸೆಬಾಸ್ಟಿಯನ್ ಅವರು ಈ ಪ್ರದೇಶದ ಉದ್ಯಮಶೀಲರಿಗೆ ಮಾದರಿಯಾಗಿ ಹೊರಹೊಮ್ಮಿದರು.

**Victor. I,**
Secretary, AHIMSA,
No. 1-207 C, Sona Complex, Main road, Vaiyampatti, 621 315. Trichy District,
Tamil Nadu,
Email: info@ahimsa.ngo

**Suresh Kanna. K,**
Senior Team Member,
Kudumbam, 113/118, Subramaniyapuram,
Trichy 620 020.
Email: kannasuresh71@gmail.com

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 23, ಸಂಚಿಕೆ 1, ಮಾರ್ಚ್ 2021.

# ಸಾವಯವ ಕೃಷಿಯೆಡೆಗೆ ಪರಿವರ್ತನೆ

**ರೋಹನ್ ಯೋಗೇಶ್ ರಾವುತ್**

**ಕೃಷಿ ಎನ್ನುವುದು ಬದಲಾವಣೆ. ಹೊಸ ಸ್ಪರ್ಷ, ಹೊಸ ದೃಷಿಕೋನ ಮತ್ತು ಹೊಸ ಸವಾಲುಗಳೊಂದಿಗೆ ರಾಸಾಯನಿಕ ಕೃಷಿಯಿಂದ ಸಾಂಪ್ರದಾಯಿಕತೆಗೆ ಮರಳುವುದು. ಸಾವಯವ, ಪುನರುತ್ಪಾದಕ ಇಲ್ಲವೇ ಶೂನ್ಯ ಬಜೆಟ್ ಕೃಷಿಯಾಗಿರಲಿ ರೈತರಿಗೆ ಮುಖ್ಯವಾದದ್ದು ಅದು ನೀಡುವ ಆರ್ಥಿಕ ಹಾಗೂ ಪರಿಸರ ಸುಸ್ಥಿರತೆ.**

ಸಾವಯವ ಕೃಷಿಯಲ್ಲಿ 11 ವರ್ಷಗಳ ಅನುಭವ ಮತ್ತು 5 ವರ್ಷಗಳು ಮಹಾರಾಷ್ಟ್ರದ ಚಂದ್ರಾಪುರ, ಚಿಮೂರ್ ಜಿಲ್ಲೆಯ ಗೊಂಡೆಡ, ತಲ್‌ನ ಮಧ್ಯಮ ಗಾತ್ರದ ಭತ್ತದ ಬೆಳೆಗಾರರೊಂದಿಗೆ (ಸಾವಯವ) ಕೆಲಸ ಮಾಡಿದ ಅನುಭವದ ಹಿನ್ನಲೆಯಲ್ಲಿ ಕಳೆದ ಖಾರಿಫ್ ಬೆಳೆಯ ಸಮಯದಲ್ಲಿ ನಾವು (ಜನರಸ್ ಟೆಕ್ನಾಲಜೀಸ್ ಪ್ರೈ. ಲಿ.,) ಅತಿಹೆಚ್ಚು ಕೀಟ ಭಾದೆಯಿರುವ ಭತ್ತದ ಪ್ರದೇಶದ ಮಹಾರಾಷ್ಟ್ರದ ಭಂದ್ರಾ ಜಿಲ್ಲೆಯ ಅಸ್ಗನ್‌ನಲ್ಲಿ ಕೆಲಸ ಮಾಡಲು ಮುಂದಾದೆವು. ಈಗಾಗಲೇ ಇರುವ ಕೃಷಿ ಪದ್ಧತಿಯನ್ನು ಬದಲಿಸುವುದು ಸುಲಭವಲ್ಲ. ಅದು ಆ ಎಂಟು ರೈತರಿಗೂ ಸುಲಭವಾಗಿರಲಿಲ್ಲ. ಯಶಸ್ವಿ ಸಾವಯವ ಭತ್ತದ ಬೆಳೆಗಾರರೊಂದಿಗಿನ ಚರ್ಚೆಗಳು ಹಾಗೂ ಕ್ಷೇತ್ರ ಭೇಟಿಗಳ ತರುವಾಯ ಈ ರೈತರ ಗುಂಪು ತಮ್ಮ ಒಟ್ಟು ಭೂಮಿಯಲ್ಲಿ ಒಂದು ಎಕರೆಯಷ್ಟು ಭೂಮಿಯಲ್ಲಿ ಸಾವಯವ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಮುಂದಾದರು. ಪರಸ್ಪರ ಒಪ್ಪಿಗೆಯ ಮೇರೆಗೆ ಜೈ ಶ್ರೀ ರಾಂ ಎನ್ನುವ ಮಧ್ಯಮ ಗಾತ್ರದ ಭತ್ತದ ತಳಿಯನ್ನು ಬೆಳೆಯಲು ಮುಂದಾದರು.

**ರೈತರ ಭೂಮಿಯಲ್ಲಿ ರಾಸಾಯನಿಕ ಒಳಸುರಿಯುವಿಕೆಗಳಿಗೆ ಬದಲಾಗಿ ಜೈವಿಕ ಒಳಸುರಿಯುವಿಕೆಗಳ ಬಳಕೆ**



"ನಾನು ಯಾವಾಗಲೂ ಸಾವಯವ ರೈತರಿಗೆ ಹೇಳುತ್ತೇನೆ– ಸಾವಯವ ಕೃಷಿ ಕೈಗೊಳ್ಳುವಂತೆ ನಿಮ್ಮ ನೆರೆಯ ರೈತರ ಮನವೊಲಿಸಿ. ನಿಮಗಾದ ಲಾಭಗಳನ್ನು ಅವನಿಗೆ ತಿಳಿಸಿ. ಅವನು ನಿಮ್ಮ ಮಾತನ್ನು ಕೇಳಿ ಅನುಸರಿಸಿದರೆ, ನೀವು ಪರೋಕ್ಷವಾಗಿ ಲಾಭ ಪಡೆದು ಸಂತೋಷವಾಗಿರುವಿರಿ. ಅವನು ಕೇಳದಿದ್ದರೆ, ಆಗಲೂ ಸಂತೋಷವಾಗಿರುತ್ತೀರಿ. ಅವನ ರಾಸಾಯನಿಕ ಬಳಕೆಯಿಂದಾಗಿ, ಕೀಟಗಳು ಮತ್ತು ರೋಗಗಳು ನಿಮ್ಮ ತೋಟಕ್ಕಿಂತ ಮೊದಲು ಅವನ ತೋಟಕ್ಕೆ ಆಕರ್ಷಿತವಾಗುತ್ತವೆ" – ಲೇಖಕ.

ಪ್ರತಿ ಎಕರೆಗೆ ಎರಡು ಟನ್ನುಗಳಷ್ಟು ಸಮೃದ್ಧ ಗೊಬ್ಬರವನ್ನು ಬಳಸಲಾಯಿತು. ಹೊಲ ಗೊಬ್ಬರ ಮತ್ತು ಕೃಷಿ ತ್ಯಾಜ್ಯವನ್ನು ಕೊಳೆಸುವ ಮೂಲಕ ಈ ಗೊಬ್ಬರವನ್ನು ತಯಾರಿಸಲಾಯಿತು. ಸಂಪೂರ್ಣವಾಗಿ ಕೊಳೆತ ನಂತರ, 8 ವಿಧದ ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರವನ್ನು ಸೇರಿಸಲಾಯಿತು. ಬೀಜ ಸಂಸ್ಕರಣೆಗಾಗಿ ವಿವಿಧ ಜೈವಿಕ ಗೊಬ್ಬರಗಳನ್ನು ಬಳಸಲಾಯಿತು. ಧೈಂಚ/ಬೋರುವನ್ನು ಹಸಿರು ಗೊಬ್ಬರವಾಗಿ ಬಳಸಲಾಯಿತು. ದಶಪರ್ಣಿ ಅರ್ಕ್ (10 ಎಲೆಗಳ ಸಾರ), ಬೇವಿನ ಎಲೆ ಸಾರ, ಅಗ್ನಿ ಅಸ್ತ್ರ (ಮೆಣಸಿನಕಾಯಿ ಬೆಳ್ಳುಳ್ಳಿ ಶುಂಠಿ ಸಾರ)ಗಳನ್ನು ಕೀಟ ನಿವಾರಕವಾಗಿ ಮತ್ತು ಪಾರ್ಥೇನಿಯಂ ಸಾರ, ಜೀವಾಮೃತ್, ವರ್ಮಿವಾಶ್ ಮತ್ತು ಪಂಚಗವ್ಯವನ್ನು ಭತ್ತದ ಕೃಷಿಗೆ ಸಸ್ಯ ಬೆಳವಣಿಗೆಯ ಉತ್ತೇಜಕವಾಗಿ ಬಳಸಲಾಯಿತು.

ಸಣ್ಣ ಗಾತ್ರದ ಜಮೀನುಗಳಲ್ಲೂ ರಸಗೊಬ್ಬರ, ಕೀಟನಾಶಕಗಳು, ಕೆಲಸಗಾರರು ಮತ್ತು ಬಂಡವಾಳದ ಹೆಚ್ಚಿನ ಬಳಕೆಯನ್ನು ಹೊಂದಿರುವ ತೀವ್ರ ಕೃಷಿ ವಲಯದಲ್ಲಿ ನಾವು ಮೊದಲ ಬಾರಿಗೆ ಕೆಲಸ ಮಾಡುತ್ತಿದ್ದೆವು. ಪ್ರತಿಕೂಲ ಹವಾಮಾನದ ಹೊರತಾಗಿಯೂ, ನೆರೆಯ ರೈತರ ರಾಸಾಯನಿಕ ಹೊಲಗಳಿಗೆ ಹೋಲಿಸಿದರೆ ಬೆಳೆಗಳು ಹೆಚ್ಚು ತೃಪ್ತಿಕರವಾಗಿ ಪ್ರತಿಕ್ರಿಯಿಸಿದ್ದನ್ನು ಕಂಡು ನಮಗೆ ಆಶ್ಚರ್ಯವಾಯಿತು. ಕಡಿಮೆ ಕೀಟ ಬಾಧೆ ಹಾಗೂ ರೋಗ ನಿರೋಧಕತೆಯ ದೃಷ್ಟಿಯಿಂದ ರೈತರು ಉತ್ತಮ ಫಲಿತಾಂಶಗಳನ್ನು ಪಡೆಯುವ ಮೂಲಕ ಅಂತಿಮವಾಗಿ ಭತ್ತದ ಉತ್ಪಾದಕತೆಯನ್ನು ಸುಧಾರಿಸಿಕೊಂಡರು.

ಎಲ್ಲಾ 8 ರೈತರು ಸಾವಯವ ಕೃಷಿಯ ಮೂಲಕ ಮೊದಲ ವರ್ಷದಲ್ಲಿ ಎಕರೆಗೆ 9–11 ಕ್ವಿಂಟಾಲ್ ಭತ್ತದ ಉತ್ತಮ ಇಳುವರಿಯನ್ನು ಪಡೆದರು ಹಾಗೂ ರಾಸಾಯನಿಕವಾಗಿ ಬೆಳೆದ ಭತ್ತದಲ್ಲಿ ಎಕರೆಗೆ 2–4 ಕ್ವಿಂಟಾಲ್ ಪಡೆದರು. ಗಮನಿಸಬೇಕಾದ ಅಂಶವೆಂದರೆ, ರಾಸಾಯನಿಕ ಕೃಷಿ ಕ್ಷೇತ್ರಗಳಲ್ಲಿ, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದಾಗಿ ವಾರ್ಷಿಕ ಉತ್ಪಾದನೆಯು ಬಹಳ ಕಡಿಮೆಯಾಯಿತು. ಸಾಮಾನ್ಯವಾಗಿ ಈ ಪ್ರದೇಶದಲ್ಲಿ ರಾಸಾಯನಿಕ ವಿಧಾನದಲ್ಲಿ ಬೆಳೆದ ಉತ್ತಮ ಭತ್ತದ ತಳಿಯು ಪ್ರತಿ ಎಕರೆಗೆ 15–16 ಕ್ವಿಂಟಾಲ್ ಇಳುವರಿ ನೀಡುತ್ತದೆ.

ರಾಸಾಯನಿಕ ಬಳಸಿ ಬೆಳೆದ ಬೆಳೆಗಳಿಗೆ ಹೋಲಿಸಿದರೆ ಉತ್ತಮ ಇಳುವರಿ ಬಂದಿದ್ದರ ಜೊತೆಗೆ ಬೆಳೆಗೆ ಉತ್ತಮ ಬೆಲೆ ಸಿಗುವಂತಾದ್ದರಿಂದ ರೈತರಿಗೆ ಸಂತೋಷವಾಯಿತು. ಉತ್ಪಾದನಾ ವೆಚ್ಚವು 50% ವರೆಗೆ ಕಡಿಮೆಯಾಗಿದೆ. ಕೆಲವು ಸಂದರ್ಭಗಳಲ್ಲಿ ಇನ್ನೂ ಕಡಿಮೆಯಾಗಿದೆ. ಅವರು ಕಳೆದ ವರ್ಷಕ್ಕಿಂತ ಹೆಚ್ಚು ಉಳಿಸುವುದರೊಂದಿಗೆ ಹೆಚ್ಚು ಗಳಿಸಿದ್ದಾರೆ.

## ನೀತಿ ಬೆಂಬಲ

ಜಿಲ್ಲೆ/ತಾಲ್ಲೂಕು ಮಟ್ಟದಲ್ಲಿ, ಕೃಷಿ ಇಲಾಖೆ ಮತ್ತು ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ATMA) ಭಾಗವಹಿಸುವಿಕೆ ಖಾತರಿ ಯೋಜನೆ (PGS) ಮೂಲಕ ಸಾವಯವ ಕೃಷಿಯನ್ನು ಉತ್ತೇಜಿಸುತ್ತಿದೆ. ಸಾವಯವ ಕೃಷಿಗೆ ಅಗತ್ಯವಿರುವ ಎಲ್ಲಾ ಒಳಸುರಿಯುವಿಕೆಗಳನ್ನು ತಯಾರಿಸಲು ರೈತರಿಗೆ ತರಬೇತಿ ನೀಡಲಾಗುತ್ತದೆ. 200 ಲೀಟರ್ ಡ್ರಮ್, ವರ್ಮಿಕಾಂಪೋಸ್ಟ್ ಘಟಕಗಳು ಮುಂತಾದ ಅಗತ್ಯ ವಸ್ತುಗಳನ್ನು ಸಬ್ಸಿಡಿ ದರದಲ್ಲಿ ಒದಗಿಸಲು ಎಟಿಎಂಎ ಅವಕಾಶ ಕಲ್ಪಿಸಿದೆ. ರೈತರ ಗುಂಪುಗಳು ಮತ್ತು ಮಹಿಳಾ ಸ್ವಸಹಾಯ ಗುಂಪುಗಳು ಸಹ HNPV ಉತ್ಪಾದನೆ, ಟ್ರೈಕೊ ಕಾರ್ಡ್ ತಯಾರಿ ತರಬೇತಿ ಪಡೆದಿವೆ. ಈ ಎಲ್ಲಾ ಪ್ರಯತ್ನಗಳೊಂದಿಗೆ, ಅನೇಕ FPOಗಳು ನೋಂದಾಯಿತ ಸಾವಯವ ಉತ್ಪಾದಕ ಗುಂಪಿನಂತೆ ಕಾರ್ಯನಿರ್ವಹಿಸುತ್ತಿವೆ. ನಾಗ್ಪುರ ಜಿಲ್ಲೆಯಲ್ಲಿ, ಕೃಷಿ ಇಲಾಖೆಗಳು ಒಟ್ಟಾಗಿ ಮುನಿಸಿಪಲ್ ಕಾರ್ಪೊರೇಶನ್‌ನೊಂದಿಗೆ ರೈತರ ಸರಕುಗಳನ್ನು ಮಾರಾಟ ಮಾಡಲು ಹಾಟ್ ಸ್ಪಾಟ್‌ಗಳನ್ನು ಗುರುತಿಸಲು ಮಾರ್ಕೆಟಿಂಗ್ ಉಪಕ್ರಮವಾಗಿ ಕಾರ್ಯನಿರ್ವಹಿಸುತ್ತಿವೆ.

ರಾಷ್ಟ್ರ ಮಟ್ಟದಲ್ಲಿ MANAGE, ಹೈದರಾಬಾದ್ ಮತ್ತು IIFSR, ಮೋದಿಪು–ರಾಮ್‌ನಂತಹ ಸಂಸ್ಥೆಗಳು ತಮ್ಮ ವಿಸ್ತರಣಾ ವ್ಯವಸ್ಥೆಗಳ ಮೂಲಕ ಸಾವಯವ ಕೃಷಿಯನ್ನು ಅಧ್ಯಯನ ಮಾಡುತ್ತಿವೆ. ಡೇಟಾವನ್ನು ಸಂಗ್ರಹಿಸುವುದರೊಂದಿಗೆ, ಉತ್ತೇಜನ ನೀಡುತ್ತಿವೆ. ಸಾವಯವ ಕೃಷಿಯಲ್ಲಿ ಪ್ರಮಾಣೀಕೃತ ಕೃಷಿ ಸಲಹೆಗಾರರು (CFA) ದೇಶಾದ್ಯಂತ ಸಾವಯವ ಸಲಹೆಗಾರರನ್ನು ರಚಿಸುವ ನವೀನ ಕೋರ್ಸ್‌ಗಳಲ್ಲಿ ಒಂದಾಗಿದೆ. ಭವಿಷ್ಯದಲ್ಲಿ ಸಾವಯವ ಕೃಷಿಯ ವಿಸ್ತರಣೆಗೆ ಈ CFAಗಳು ನೆರವಾಗುತ್ತವೆ.

ಪ್ರತಿಯೊಂದು ಹಂತದ ವಿಸ್ತರಣೆಯ ಉಪಕ್ರಮಗಳು ರೈತರು ಜವಾಬ್ದಾರಿಯುತವಾಗಿ ಕೃಷಿ ಮಾಡಲು ಖಂಡಿತವಾಗಿಯೂ ಸಹಾಯ ಮಾಡುತ್ತಿವೆ. ರೈತರಿಗೆ ಮಾಹಿತಿ ಹರಿವು ಸಮಾನವಾಗಿ ಹಂಚಿಕೆಯಾಗುತ್ತದೆ. ಜೈವಿಕ ಗೊಬ್ಬರಗಳಂತಹ ಒಳಸುರಿಯುವಿಕೆಗಳು ಮಾರುಕಟ್ಟೆಯಲ್ಲಿ ಸುಲಭವಾಗಿ ಲಭ್ಯವಿರುತ್ತದೆ. ಸ್ಟಾಕ್ ಇಲ್ಲದಿದ್ದಾಗ ಅದನ್ನು ಸುಲಭವಾಗಿ ಆರ್ಡರ್ ಮಾಡಬಹುದು.

## ಸವಾಲುಗಳು

ಸಾವಯವ ಕೃಷಿಯನ್ನು ಯೋಜಿತ ಚಟುವಟಿಕೆಯಾಗಿ ಒಪ್ಪಿಕೊಳ್ಳಬೇಕು. ಸಾವಯವ ಕೃಷಿಯು ಮೂಲತಃ ತಡೆಗಟ್ಟುವ ಒಂದು ವಿಧಾನವಾಗಿದೆ. ಸಾವಯವ ಕೃಷಿ ಚಟುವಟಿಕೆಯನ್ನು ಪ್ರಾರಂಭಿಸಲು, ಬೆಳೆ ಉತ್ಪಾದನೆಯಿಂದ ಉತ್ಪನ್ನಗಳ ಮಾರುಕಟ್ಟೆಯವರೆಗಿನ ಸಂಪೂರ್ಣ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ತಾಳ್ಮೆಯ ಅಗತ್ಯವಿದೆ. ಕೆಲವು ಸಂದರ್ಭಗಳಲ್ಲಿ ಇದು ತಪ್ಪಾಗಿದೆ.

ಸಾವಯವ ಕೃಷಿಯ ಅಳವಡಿಕೆಯಲ್ಲಿ ಸರ್ಕಾರದ ವ್ಯವಸ್ಥೆಯಲ್ಲಿ ಸಾಕಷ್ಟು ಅವಕಾಶಗಳಿದ್ದರೂ, ರೈತರು ಸಾವಯವ ಕೃಷಿಗೆ ಪರಿವರ್ತನೆಗೊಳ್ಳಲು ತಡವಾಗುತ್ತಿರುವುದಕ್ಕೆ ಕಾರಣಗಳು ಈ ಕೆಳಗಿನಂತಿವೆ:–

- ರಾಸಾಯನಿಕ ಕೃಷಿಯು ರೈತರ ಮನಸ್ಥಿತಿಯನ್ನು "ರೆಡಿಮೇಡ್ ಮತ್ತು ಫಾಸ್ಟ್" ಗೆ ಬದಲಾಯಿಸಿದೆ. ಸಾವಯವ ಕೃಷಿಯಲ್ಲಿ, ರೈತರು ತಾವೇ ರಸಗೊಬ್ಬರಗಳು, ಕೀಟ ನಿಯಂತ್ರಕ ಒಳಸುರಿಯುವಿಕೆಗಳು ಮತ್ತು ಶಿಲೀಂಧ್ರನಾಶಕಗಳನ್ನು ತಯಾರಿಸಬೇಕು/ಸಂಸ್ಕರಿಸಬೇಕು. ಇದನ್ನು ಮಾಡಲು ಅನೇಕರು ಹಿಂಜರಿಯುತ್ತಾರೆ.
- ಸಾವಯವ ಕೃಷಿಯು ತಡೆಗಟ್ಟುವ ಒಂದು ವಿಧಾನವಾಗಿರುವುದರಿಂದ, ಸಾವಯವಕ್ಕೆ ಪರಿವರ್ತನೆಗೊಳ್ಳುವ ಆರಂಭಿಕ ಹಂತಗಳಲ್ಲಿ, ಸಿಂಪರಣೆಯ ವೇಳಾಪಟ್ಟಿಯನ್ನು

ಸರಿಯಾಗಿ ಅನುಸರಿಸಬೇಕು. ಸಿಂಪರಣೆಯ ಸಂಖ್ಯೆಯು (ಕೆಲವು ಸಂದರ್ಭಗಳಲ್ಲಿ) ಹೆಚ್ಚಾಗಬಹುದು. ಹಲವು ಸಲ ಇದನ್ನು ರೈತರು ಮಾಡುವುದಿಲ್ಲ. ಸೋಂಕು ನಿಯಂತ್ರಣಕ್ಕೆ ಬಾರದೇ ಹೋದಾಗ ಸಾವಯವ ಕೃಷಿಯನ್ನೇ ದೂರುತ್ತಾರೆ.

- ರಾಸಾಯನಿಕ ವಿಧಾನಗಳಿಗೆ ಹೋಲಿಸಿದರೆ ಕೂಲಿಕಾರರ ಅವಶ್ಯಕತೆ ಕೊಂಚ ಹೆಚ್ಚಿರುತ್ತದೆ. ಕೂಲಿಕಾರರ ಸಮಸ್ಯೆಯಿರುವ ಕಡೆ ಮತ್ತು ಹೆಚ್ಚು ಭೂಮಿಯಿರುವಲ್ಲಿ ಇದೊಂದು ಸಮಸ್ಯೆಯಾಗುತ್ತದೆ.
- ಸಾವಯುವ ಕೃಷಿ ಘಟಕವು ಪಶುಸಂಗೋಪನೆಯ ಸಂಯೋಜನೆಯೊಂದಿಗೆ ಲಾಭ ಪಡೆಯುತ್ತದೆ. "ಒಂದು ಉದ್ಯಮದ ತ್ಯಾಜ್ಯವು ಮತ್ತೊಂದಕ್ಕೆ ಉಪಯುಕ್ತ" ಎನ್ನುವುದನ್ನು ನೆನಪಿನಲ್ಲಿಡಬೇಕು. ಎಲ್ಲ ರೈತರು ಹಸುಗಳನ್ನು ಸಾಕಿರುವುದಿಲ್ಲ. ಒಳಸುರಿಯುವಿಕೆಗಳ ತಯಾರಿಕೆಗೆ ಗಂಜಲ ಮತ್ತು ಸಗಣಿಯ ಅಗತ್ಯವಿರುತ್ತದೆ. ಇವುಗಳನ್ನು ಖರೀದಿಸಬೇಕಾದಲ್ಲಿ ವೆಚ್ಚವು ಹೆಚ್ಚಾಗುತ್ತದೆ.

## ಕ್ರಮಿಸಬೇಕಾದ ಹಾದಿ

ಬೆಳೆಯನ್ನು ಆಯ್ಕೆ ಮಾಡುವ ಮೊದಲು ಉತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆಯನ್ನು ಗುರುತಿಸಿಕೊಳ್ಳಬೇಕು. ರೈತರು ಎಪಿಎಂಸಿಯಲ್ಲಿ ಬೆಳೆಗಳನ್ನು ಮಾರಾಟ ಮಾಡಲು ಬಯಸಿದರೆ, ಸಾವಯವ ಕೃಷಿಗಾಗಿ ಅಮೂಲ್ಯವಾದ ಶ್ರಮವನ್ನು ವ್ಯರ್ಥಮಾಡಿ ಎಂದು ಸಲಹೆ ನೀಡಲಾಗುವುದಿಲ್ಲ. ತಮ್ಮ ಮಾರುಕಟ್ಟೆ ಯಾವುದು ಎಂದು ಗುರುತಿಸಿಕೊಂಡರೆ ಅರ್ಧ ಯುದ್ಧವನ್ನು ಗೆದ್ದಂತೆ.

ಕೃಷಿ ಮಾಡುವ ಮೊದಲು, ರೈತರು ಸಾವಯವ ವಿಧಾನದ ಮೂಲಕ ಉತ್ಪಾದನೆಯ ಹಿಂದಿರುವ ವಿಜ್ಞಾನವನ್ನು ಅರ್ಥಮಾಡಿಕೊಳ್ಳಬೇಕು. ಮಣ್ಣು, ಬೆಳೆ, ಲಭ್ಯವಿರುವ ಸಂಪನ್ಮೂಲಗಳನ್ನು ಅಧ್ಯಯನ ಮಾಡಬೇಕೆಂದು ಶಿಫಾರಸು ಮಾಡಲಾಗುತ್ತದೆ. ಮತ್ತೊಬ್ಬರ ವಿಧಾನಗಳನ್ನು ಕಾಪಿ ಮಾಡುವುದು ಸರಿಯಲ್ಲ. ರೈತರು ತಮ್ಮ ಪರಿಸರ ಮತ್ತು ಲಭ್ಯವಿರುವ ಸಂಪನ್ಮೂಲಗಳಿಗೆ ಅನುಗುಣವಾಗಿ ವಿಧಾನದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಈ ಎಲ್ಲ ಅಂಶಗಳನ್ನು ಅಧ್ಯಯನ ಮಾಡಿದ ನಂತರ ರೈತರು ಕಡಿಮೆ ಪ್ರದೇಶದಲ್ಲಿ ಸಾವಯವ ಕೃಷಿ ಆರಂಭಿಸಬೇಕು.

ತಿಳುವಳಿಕೆ ಮತ್ತು ಸಂಪನ್ಮೂಲಗಳ ಪರಸ್ಪರ ವಿನಿಮಯಕ್ಕೆ ಗುಂಪನ್ನು ರಚಿಸಿಕೊಳ್ಳುವುದು ಸಹಕಾರಿ. ಇದರಿಂದ ಖರೀದಿ ಮತ್ತು ಮಾರಾಟಕ್ಕೂ ಅನುಕೂಲವಾಗುತ್ತದೆ.

ಮಣ್ಣು, ನೀರಿನ ಸುಧಾರಣೆ, ಆರೋಗ್ಯದ ಮೇಲಿನ ಇತ್ಯಾತ್ಮಕ ಪರಿಣಾಮಗಳು ಮುಂತಾದ ಪರೋಕ್ಷ ಪ್ರಯೋಜನಗಳನ್ನು ಒಂದು ಕ್ಷಣ ನಿರ್ಲಕ್ಷಿಸಿದರೂ ಸಹ, ಹೆಚ್ಚಿನ ಮಾರುಕಟ್ಟೆ ಮೌಲ್ಯದಿಂದ ಸಾವಯವ ಕೃಷಿಯಿಂದ ಹಲವಾರು ಆರ್ಥಿಕ ಪ್ರಯೋಜನಗಳಿವೆ. ಮೊದಲು, ಸಾವಯವ ಕೃಷಿಯ ಆರ್ಥಿಕ ಲಾಭದ ಕುರಿತು ರೈತರಲ್ಲಿ ಭರವಸೆ ಮೂಡಬೇಕು. ಪರೋಕ್ಷ ಲಾಭಗಳು ಅವರಿಗೆ ಬೋನಸ್ ಇದ್ದಂತೆ.

ವೇಗದ ಮತ್ತು ಸಿದ್ಧ ವಿಧಾನಗಳನ್ನು ನಿರ್ಲಕ್ಷಿಸಲು ಮತ್ತು ಆರ್ಥಿಕ ಹಾಗೂಪರಿಸರ ಸುಸ್ಥಿರತೆಯ ಬದಲಾಗುತ್ತಿರುವ ಅಗತ್ಯಗಳಿಗೆ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸಲು ಇದು ಸೂಕ್ತವಾದ ಸಮಯ.

**Rohan Yogesh Raut**
Address - 63, Mire Lay-out, Near Sudampuri, Sakkardara Square, Nagpur 440009
Email: raut.rohan1@gmail.com

**ಆಂಗ್ಲ ಮೂಲ :**
ಲೀಸಾ ಇಂಡಿಯಾ, ಸಂಪುಟ 23, ಸಂಚಿಕೆ 1, ಮಾರ್ಚ್ 2021.

**LEISA INDIA Language Editions**



**Kannada, Telugu, Tamil, Oriya, Hindi, Marathi, Punjabi**

# ಉತ್ತಮ ಆದಾಯಕ್ಕಾಗಿ ಮೌಲ್ಯವರ್ಧನೆ

**ಅಯ್ಯಗಾರಿ ರಾಮಲಾಲ್, ದಂಡಪಾಣಿ ರಾಜು, ಮಧುಲಿಕಾ ಸಿಂಗ್, ಅಜಯ್ ಕುಮಾರ್ ಮತ್ತು ಅಂಬಿಕಾ ರಾಜೇಂದ್ರನ್**

**ರೈತ ಉತ್ಪಾದಕ ಸಂಸ್ಥೆಗಳು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಮ್ಮ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಲು ಸಹಾಯ ಮಾಡುವಲ್ಲಿ ಅಪಾರ ಸಾಮರ್ಥ್ಯವನ್ನು ಹೊಂದಿವೆ. ಮೌಲ್ಯವರ್ಧನೆಯಲ್ಲಿ ಈ ಸಂಸ್ಥೆಗಳ ಸಾಮರ್ಥ್ಯ ಹೆಚ್ಚಿದಲ್ಲಿ ಉತ್ಪನ್ನದ ಗುಣಮಟ್ಟ ಹೆಚ್ಚುತ್ತದೆ, ಮಾರಾಟದ ಸಾಮರ್ಥ್ಯ ಸುಧಾರಿಸುತ್ತದೆ, ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಮತ್ತು ಆದಾಯವನ್ನು ಒದಗಿಸುತ್ತದೆ.**

ಭಾರತದಲ್ಲಿನ ಕೃಷಿಗುಂಪಿನಲ್ಲಿ ಮುಖ್ಯವಾಗಿ ಇರುವುದು ಸಣ್ಣ ಮತ್ತು ಅತಿಸಣ್ಣ ರೈತರು. ರೈತರ ಪ್ರಾಥಮಿಕ ಸವಾಲುಗಳು ಬೆಳೆ ವೈಫಲ್ಯ, ಹವಾಮಾನ ಬದಲಾವಣೆಗಳು, ತಿಳುವಳಿಕೆ ಮತ್ತು ಮಾರ್ಗದರ್ಶನದ ಕೊರತೆ, ಸಾಲದ ಹೊರೆ, ದುಡಿಯುವ ಬಂಡವಾಳದ ಕೊರತೆ. ಇವು ಅವರನ್ನು ದುರ್ಬಲರನ್ನಾಗಿಸಿದೆ. ಅಸಂಘಟಿತರಾಗಿರುವುದರಿಂದ ಒಳಸುರಿಯುವಿಕೆಗಳನ್ನು ಪಡೆಯಲು, ಮಾರುಕಟ್ಟೆಯ ಮೇಲೆ ಹತೋಟಿ ಸಾಧಿಸಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಸಣ್ಣ ರೈತರ ಗುಂಪುಗಳಾದ ರೈತ ಉತ್ಪಾದಕ ಸಂಸ್ಥೆಗಳು (FPOs) ಮತ್ತು ಸಹಕಾರಿ ಸಂಸ್ಥೆಗಳು ರೈತರು, ಮೀನುಗಾರರು, ಹಾಲು ಉತ್ಪಾದಕರು, ನೇಕಾರರು ಮತ್ತು ಇತರ ಪ್ರಾಥಮಿಕ ಉತ್ಪಾದಕರಿಂದ ರಚಿಸಲ್ಪಟ್ಟ ಕಾನೂನು ಸಂಸ್ಥೆಗಳಾಗಿವೆ. ಅವು ಉತ್ಪಾದಕ ಕಂಪನಿಯಾಗಿರಬಹುದು ಅಥವಾ ಸದಸ್ಯರ ನಡುವೆ ಲಾಭಗಳ ಹಂಚಿಕೆಯನ್ನು ಸಕ್ರಿಯಗೊಳಿಸುವ ಸಹಕಾರಿ ಸಂಘವಾಗಿರಬಹುದು. ಅಂತಹ ಉತ್ಪಾದಕ ಸಂಸ್ಥೆಗಳ ಪ್ರಾಥಮಿಕ ಧ್ಯೇಯವು ತಮ್ಮ ಸಂಸ್ಥೆಯ ಉತ್ಪಾದಕರಿಗೆ ಉತ್ತಮ ಆದಾಯ ಸಿಗುವಂತೆ ಮಾಡುವುದು. ಅವು ಆದಾಯವನ್ನು ಹೆಚ್ಚಿಸುವ ನಿರೀಕ್ಷೆ ಹೊಂದಿರುತ್ತದೆ, ವಹಿವಾಟು ವೆಚ್ಚಗಳು ಸೇರಿದಂತೆ ಒಳಸುರಿಯುವಿಕೆ ಖರೀದಿಗಳ ವೆಚ್ಚವನ್ನು ಕಡಿಮೆ ಮಾಡುತ್ತದೆ, ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ, ಸಂಸ್ಕರಣೆ, ವಿತರಣೆ ಮತ್ತು ಮಾರುಕಟ್ಟೆ ಸೇರಿದಂತೆ ಮೌಲ್ಯವರ್ಧನೆಯಲ್ಲಿ ಅವರನ್ನು ತೊಡಗಿಸಿಕೊಳ್ಳುತ್ತದೆ, ಚೌಕಾಶಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಮತ್ತು ಔಪಚಾರಿಕ ಸಾಲಕ್ಕೆ ಪ್ರವೇಶವನ್ನು ಒದಗಿಸುತ್ತದೆ. ಈ ಎಫ್‌ಪಿಒಗಳು ಸದಸ್ಯರ ವಿಶ್ವಾಸವನ್ನು ಗಳಿಸುವ ವಿಷಯದಲ್ಲಿ ನಿಯಮಿತವಾಗಿ ವಿವಿಧ ಸಮಸ್ಯೆಗಳು ಮತ್ತು ಸವಾಲುಗಳನ್ನು ಎದುರಿಸುತ್ತವೆ. ಮತ್ತೊಂದೆಡೆ ಸದಸ್ಯರಿಗೆ ಅದರ ಸ್ವರೂಪದ ಕುರಿತಾಗಲಿ, ತಾವು ಅದರ ಸದಸ್ಯರಾಗುವ ಆಯ್ಕೆ ಕುರಿತಾಗಲಿ ಸ್ಪಷ್ಟತೆಯಿರುವುದಿಲ್ಲ. ಪ್ರಸ್ತುತ, ಬೆಂಬಲವನ್ನು ನೀಡುತ್ತಿರುವ ಮುಖ್ಯವಾಹಿನಿಯ ಪ್ರಮುಖ ಸಂಸ್ಥೆ ಎಂದರೆ, ನ್ಯಾಷನಲ್ ಬ್ಯಾಂಕ್ ಫಾರ್ ಅಗ್ರಿಕಲ್ಚರಲ್ ಅಂಡ್ ರೂರಲ್ ಡೆವಲಪ್‌ಮೆಂಟ್ (ನಬಾರ್ಡ್). ಇದು ತಾಂತ್ರಿಕ ಮತ್ತು ವ್ಯವಸ್ಥಾಪಕ ಬೆಂಬಲದ ಜೊತೆಗೆ ಹಣಕಾಸಿನ ನೆರವು ನೀಡುವ ಮೂಲಕ ಉತ್ಪಾದಕ ಸಂಸ್ಥೆಗಳನ್ನು ಬೆಂಬಲಿಸುತ್ತಿದೆ. ಶ್ರೀ ಬಾಲಾಜಿ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್, ಚೌಕ 1 ರಲ್ಲಿ ಉದಾಹರಣೆಯಾಗಿ ನೀಡಲಾಗಿದೆ.

**ಚೌಕ 1 : ಶ್ರೀ ಬಾಲಾಜಿ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ**

ಶ್ರೀ ಬಾಲಾಜಿ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ ಎಂಬುದು ಬಿಹಾರದ ಗಯಾದ ಮುರೇರಾ ಗ್ರಾಮದಲ್ಲಿ 2019 ರಲ್ಲಿ ಪ್ರಾರಂಭವಾದ ರೈತ ಉತ್ಪಾದಕ ಸಂಸ್ಥೆಯಾಗಿದೆ. ಈ ಸಂಸ್ಥೆಯನ್ನು ಆರಂಭದಲ್ಲಿ ATMA ಗುಂಪಿನಂತೆ ಪ್ರಾರಂಭಿಸಲಾಯಿತು. ಹಿಂದೆ "ಶ್ರೀ ಬಾಲಾಜಿ ಕೃಷಿ ಉದಯ್ಮಿ ಸಮೂಹ" ಎಂದು ಕರೆಯಲಾಗುತ್ತಿತ್ತು. ಸುಮಾರು 30 ರೈತರನ್ನು ತೊಡಗಿಸಿಕೊಂಡು ಇದನ್ನು ಪ್ರಾರಂಭಿಸಲಾಯಿತು. ನಂತರ, ಈ ಸಂಸ್ಥೆಯು ರೂ 3,20,000 ಆರಂಭಿಕ ಬಂಡವಾಳದೊಂದಿಗೆ ಕಸ್ಟಮ್ ನೇಮಕಾತಿ ಕೇಂದ್ರವನ್ನು ಸ್ಥಾಪಿಸಿತು. ನಂತರ, ರೂ. 10 ಲಕ್ಷ ಹೂಡಿಕೆಯೊಂದಿಗೆ ವಿವಿಧ ಕೃಷಿ ಉಪಕರಣಗಳನ್ನು ಖರೀದಿಸಿ ಅದನ್ನು ಬಳಸಲಾರಂಭಿಸಿದರು. ಮೊದಲ ವರ್ಷ ರೂ. 4 ಲಕ್ಷ ಲಾಭ ಪಡೆದರು. ಸದಸ್ಯತ್ವದ ವಿಸ್ತರಣೆ ಈ ಸಂಸ್ಥೆ ಎದುರಿಸಿದ ಪ್ರಮುಖ ಅಡಚಣೆಯಾಗಿದೆ. ಕೆವಿಕೆ ಮತ್ತು ಎಟಿಎಂಎ ಗುಂಪುಗಳು ಮತ್ತು ಎಟಿಎಂಎ ಗುಂಪಿನ ಜನರು ಅವರಿಗೆ ಸಹಾಯ ಮಾಡಿದರು. ಪ್ರಸ್ತುತ, ಅವರು ಲೆಮೊನ್ಗ್ರಾಸ್ ಕೃಷಿ, ಜಿ–9 ಬಾಳೆಹಣ್ಣುಗಳು ಮತ್ತು ರೆಡ್ ಲೇಡಿ ಪಪ್ಪಾಯಿ ಮತ್ತು ಮೀನುಗಾರಿಕೆಯನ್ನು ಒಳಗೊಂಡಿರುವ ಹೊಸ ಉಪಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬಾಸ್ಮತಿ ಅಕ್ಕಿಯ (1121 ಮತ್ತು 1509) ತಳಿಗಳನ್ನು ಬಂಗಾಳ ಮತ್ತು ಪಂಜಾಬ್‌ನ ಮಾರುಕಟ್ಟೆಗಳಿಗೆ ಉತ್ತಮ ಬೆಲೆಗೆ ಮಾರಾಟ ಮಾಡಲು ಪ್ರಯತ್ನಿಸಲು ಪ್ರಾರಂಭಿಸಿದರು.

## ಕೆಲವು ಯಶೋಗಾಥೆಗಳು

ಕೊಯ್ಲಿನ ನಂತರ ನಷ್ಟ ಕಡಿಮೆ ಮಾಡುವ ಮತ್ತು ಉತ್ತಮ ಆದಾಯ ಗಳಿಸುವ ಮೌಲ್ಯವರ್ಧನೆಯು ಹಲವು ಎಫ್‌ಪಿಒಗಳ ತಂತ್ರವಾಗಿದೆ. ವಿವಿಧ ಸಂದರ್ಭಗಳಲ್ಲಿ ಇಂತಹ ಪ್ರಯತ್ನಗಳ ಹಲವು ಉದಾಹರಣೆಗಳಿವೆ. ಏಕರೂಪದ ಉತ್ಪಾದನೆ ಅಥವ ಸ್ಥಳೀಯ ಉತ್ಪಾದನೆಯ ಸಂದರ್ಭದಲ್ಲಿ ಇದನ್ನು ಕಾಣಬಹುದು. ಇದು ಅವರಿಗೆ

ಸಂಘಟನೆಯ ಅವಕಾಶವನ್ನು ಒದಗಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ, ಸಂಸ್ಕರಣೆ, ಮೌಲ್ಯವರ್ಧನೆಗೆ ಅಗತ್ಯವಿರುವ ಕೌಶಲ್ಯಗಳ ಸಾಮರ್ಥ್ಯದ ಮೂಲಕ ಸದಸ್ಯರ ಸಾಮರ್ಥ್ಯಗಳನ್ನು ಸುಧಾರಿಸಬೇಕು.

ವೈವಿಧ್ಯಮಯ ಸನ್ನಿವೇಶಗಳ ಕೆಲವು ಉದಾಹರಣೆಗಳನ್ನು ಕೆಳಗೆ ವಿವರಿಸಲಾಗಿದೆ.

## ಮೇಘಾಲಯದಲ್ಲಿ ಬಾಳೆಯ ಮೌಲ್ಯವರ್ಧನೆ

ಮೇಘಾಲಯದ ಬೋಲ್ಕಿಂಗ್ರೆ ಮಹಿಳಾ ಸರಕು ಹಿತಾಸಕ್ತಿ ಗುಂಪು ಬಾಳೆ ಕೃಷಿಗೆ ಸಂಬಂಧಿಸಿದೆ. ಬಾಳೆಹಣ್ಣು ಅನೇಕ ಜೀವಸತ್ವಗಳು ಮತ್ತು ಖನಿಜಗಳಿಂದ ಸಮೃದ್ಧವಾಗಿದೆ. ಮೇಘಾಲಯದ ಗಾರೋ ಬೆಟ್ಟಗಳಲ್ಲಿ ವ್ಯಾಪಕವಾಗಿ ಬೆಳೆಯುವ ತೋಟಗಾರಿಕಾ ಬೆಳೆಯಾಗಿದೆ. ಅವರು ಬಿಟಗುರಿ (ಅಥವಾ ನೇಂದ್ರನ್) ಎಂಬ ದೇಸಿ ಬಾಳೆಹಣ್ಣನ್ನು ಬೆಳೆಯುತ್ತಾರೆ. ಹಣ್ಣಿನ ಗಾತ್ರ ಮತ್ತು ಚಿಪ್ಸ್ ಮಾಡಲು ಸೂಕ್ತವಾಗಿರುವುದು ಈ ವಿಶಿಷ್ಟ ಬಾಳೆಯ ಆಕರ್ಷಣೆಯಾಗಿದೆ. ಈಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಕೇಂದ್ರದ ನೆರವಿನಿಂದ ಉಪ್ಪಿನಕಾಯಿ ಹಾಗೂ ಬಾಳೆಹಣ್ಣಿನ ಚಿಪ್ಸ್ ಮಾಡುವ ತಂತ್ರವನ್ನು ಕಲಿತರು. ಇದರಿಂದಾಗಿ ಅವರ ವಾರದ ಹಾಗೂ ತಿಂಗಳ ಆದಾಯ ಹೆಚ್ಚಿತು.

## ಮೀನು ಮತ್ತು ಅದರ ಉತ್ಪನ್ನಗಳ ಮೌಲ್ಯವರ್ಧನೆ

ATMA ಗುಂಪು (ಶ್ರೀ ರೇಣುಕಾದೇವಿ ಎಟಿಎಂಎ ಗುಂಪು) ಮೌಲ್ಯವರ್ಧನೆಯೊಂದಿಗೆ ಗುಂಪು ವಿಧಾನದ ಮೂಲಕ ಅವರ ಕೃಷಿ ಮತ್ತು ಆದಾಯದ ಸ್ಥಿತಿಯನ್ನು ಹೆಚ್ಚಿಸಲು ಯೋಜಿಸಿದೆ. ಮೌಲ್ಯವರ್ಧನೆ ಮತ್ತು ಕೊಯ್ಲಿನ ನಂತರದ ತಂತ್ರಜ್ಞಾನ ಎರಡರಲ್ಲೂ ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ, ಮೀನು ಸಂಸ್ಕರಣೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳ (ಒಣ ಉತ್ಪನ್ನಗಳು, ಬೇಯಿಸಿದ ವಸ್ತುಗಳು ಮತ್ತು ಸಂಗ್ರಹಿಸಬಹುದಾದ ಮೀನು ಉತ್ಪನ್ನಗಳು) ಉತ್ಪಾದನೆಯ ವ್ಯಾಪ್ತಿಯನ್ನು ಹೆಚ್ಚಿಸಲು, ಜೊತೆಗೆ ಮಾರುಕಟ್ಟೆ ತಂತ್ರಗಳ ಕುರಿತು ಮೀನು ಸಂಸ್ಕರಣಾ ತಂತ್ರಜ್ಞಾನಗಳ ಕುರಿತು ತಮಿಳುನಾಡು ಡಾ ಜಯಲಲಿತಾ ಮೀನುಗಾರಿಕಾ ವಿಶ್ವವಿದ್ಯಾಲಯದ ಸಹಾಯದಿಂದ ಗುಂಪು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದೆ. ಈ ಗುಂಪು ಮೌಲ್ಯವರ್ಧನೆಯನ್ನು ಕೈಗೊಳ್ಳಬೇಕಾಗಿದೆ.

ಮಾವಿನ ಮೌಲ್ಯವರ್ಧನೆ – ಕೃಷಿ ವಿಜ್ಞಾನ ಕೇಂದ್ರ, ಉನ್ನಾವ್ ಮತ್ತು ಉತ್ತರ ಪ್ರದೇಶದ ಜಿಲ್ಲಾ ಕೃಷಿ ಇಲಾಖೆಯು ಶ್ರೀಮತಿ ತಾರಾವತಿ ಅವರಿಗೆ ತಾಂತ್ರಿಕ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡುವ ಮೂಲಕ ಅವರ ಕೃಷಿಯನ್ನು ಉತ್ತಮ ರೀತಿಯಲ್ಲಿ ಸುಸ್ಥಿರಗೊಳಿಸಿಕೊಳ್ಳಲು ಸಹಾಯ ಮಾಡಿದೆ. ನಂತರ ಅವರು "ಮಾವಿನ ಹಣ್ಣಿನ ಮೌಲ್ಯವರ್ಧನೆಯ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣ" ಯೋಜನೆಯ ಭಾಗವಾದರು. ನಂತರ, ಆಕೆ ತನ್ನ ಜಮೀನಿನ ಮಾವಿನ ಹಣ್ಣಿನಲ್ಲಿ ಮೌಲ್ಯವರ್ಧನೆಯನ್ನು ಪ್ರಾರಂಭಿಸಿದಳು. ಉಪ್ಪಿನಕಾಯಿ ಮತ್ತು ಪುಡಿಯನ್ನು ತಯಾರಿಸಿ ತನ್ನ ಆದಾಯವನ್ನು ಹೆಚ್ಚಿಸಿಕೊಂಡಳು.

## ಉಪಸಂಹಾರ

ರೈತ ಉತ್ಪಾದಕ ಸಂಸ್ಥೆಗಳು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಮ್ಮ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಲು ಸಹಾಯ ಮಾಡುವಲ್ಲಿ ಅಪಾರ ಸಾಮರ್ಥ್ಯವನ್ನು ಹೊಂದಿವೆ. ಅವರು ರೈತರಿಗೆ ಹೆಚ್ಚಿನ ಚೌಕಾಶಿ ಶಕ್ತಿಯಂತಹ ಅನೇಕ ಪ್ರಯೋಜನಗಳನ್ನು ಒದಗಿಸುತ್ತಾರೆ, ಒಳಸುರಿಯುವಿಕೆಗಳು ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತಾರೆ. ಈ ಸಂಸ್ಥೆಗಳ ಸಾಮರ್ಥ್ಯವನ್ನು ವಿವಿಧ ತರಬೇತಿ ಕಾರ್ಯಕ್ರಮಗಳ ಮೂಲಕ ನಿರ್ಮಿಸಬೇಕು. ಉತ್ತಮ ಗುಣಮಟ್ಟದ ಉತ್ಪನ್ನವನ್ನು ಪಡೆಯಲು, ಕೊಯ್ಲಿನ ನಂತರದ ನಷ್ಟವನ್ನು ಕಡಿಮೆ ಮಾಡಲು, ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮತ್ತು ಮೌಲ್ಯವರ್ಧನೆಯ ಮೂಲಕ ಉತ್ತಮ ಆದಾಯವನ್ನು ಪಡೆಯಲು ಅವರಿಗೆ ಸಹಾಯ ಮಾಡುತ್ತದೆ. ಪ್ರಸ್ತುತ, ಅವರು NABARD ಮತ್ತು SFAC (ಸಣ್ಣ ರೈತರ ಕೃಷಿ ಉದ್ಯಮ ಒಕ್ಕೂಟ), KVK ಗಳು, ATMA ಹಾಗೂ ಹಲವಾರು NGOಗಳಿಂದ ಬೆಂಬಲ ಪಡೆಯುತ್ತಿದ್ದಾರೆ.

## ಪರಾಮರ್ಶನ ಲೇಖನಗಳು


1. Bikkina, N., Turaga, R. M. R., & Bhamoriya, V., **Farmer producer organizations as farmer collectives: A case study from India.,** 2018, Development Policy Review, 36(6), 669-687.

2. **Inspiring stories of progressive women farmers.,** 2020, Ministry of Agriculture & Farmers Welfare Department of Agriculture, Cooperation & Farmers Welfare. https://agricoop.nic.in/sites/default/files/Success%20Story%20_%208.pdf

3. NABARD., **Farmer producer organisations.,** 2015, https://www.nabard.org/demo/auth/writereaddata/File/FARMER%20PRODUCER%20ORGANISATIONS.pdf



**Ayyagari Ramlal** and **Ambika Rajendran**
Division of Genetics, ICAR-Indian Agricultural Research Institute (IARI), Pusa Campus,
Delhi – 110012.
Corresponding author Email:
rambikarajendran@gmail.com

**Dhandapani Raju**
Division of Plant Physiology, ICAR-Indian Agricultural Research Institute (IARI),
Pusa Campus, Delhi – 110012

**Madhulika Singh**, and **Ajay Kumar**
Cereal Systems Initiative for South Asia (CSISA - CIMMYT), Bihar.



**ಆಂಗ್ಲ ಮೂಲ :**
ಲೀಸಾ ಇಂಡಿಯಾ; ಸಂಪುಟ 23, ಸಂಚಿಕೆ 2, ಜೂನ್ 2021.

# ಸಾವಯವ ಡ್ರ್ಯಾಗನ್ ಹಣ್ಣು ಕೃಷಿ

**ಗೋಪಿ ಕರೆಲಿಯ**

**ಪಂಜಾಬಿನ ಹರ್ಬಂತ್‌ಸಿಂಗ್‌ಅವರು ಸಾಂಪ್ರದಾಯಿಕ ಬೆಳೆಗಳಿಗಿಂತ ಡ್ರ್ಯಾಗನ್‌ಹಣ್ಣು ಮತ್ತು ಗಂಧದ ಮರಕ್ಕೆ ಕಡಿಮೆ ನೀರಿನ ಅಗತ್ಯವಿದೆಯೆಂದು ಸಾವಯವ ಕೃಷಿಗೆ ಹೊರಳಿಕೊಂಡರು.**

ಹರ್ಬಂತ್‌ಸಿಂಗ್ ಅವರು ಪಂಜಾಬಿನ ತುಲೇವಾಲ್‌ಗ್ರಾಮದವರು. ಅವರು ತಮ್ಮ ಕುಟುಂಬದ ವೃತ್ತಿಯಾದ ಕೃಷಿಯನ್ನು 70ರ ದಶಕದಲ್ಲಿ ಆರಂಭಿಸಿದಾಗ ಅಂತರ್ಜಲವು 15 ಅಡಿಗಳಲ್ಲೇ ಸಿಗುತ್ತಿತ್ತು. ದಶಕಗಳ ನಂತರ ಅವರ ಮಗ ಸತ್ನಾಮ್‌ಕೃಷಿಯನ್ನು ಆರಂಭಿಸಿದಾಗ ಅಂತರ್ಜಲವು 150 ಅಡಿಗಳಿಗೆ ಕುಸಿದಿತ್ತು. ಇದು ಅವರ ಕುಟುಂಬದ ಮೇಲೆ ತೀವ್ರ ಪರಿಣಾಮ ಬೀರಿತು. ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಿದ್ದರಿಂದ ಹೆಚ್ಚಿನ ನೀರು ಬೇಕಾಗುತ್ತಿತ್ತು. ಕೊಳವೆ ಬಾವಿಗಳಿಂದ ನೀರನ್ನೆತ್ತಲು ಮೋಟಾರುಗಳಿಗೆ ಹೆಚ್ಚು ವೆಚ್ಚವಾಗುತ್ತಿತ್ತು. ಪಂಚನದಿಗಳ ರಾಜ್ಯದಲ್ಲಿ ಉಳಿದ ರೈತರಂತೆ ಈ ಅಪ್ಪ-ಮಗ ಕೂಡ ನೀರಿನ ಕೊರತೆಯನ್ನು ಎದುರಿಸಿದರು.

ಅಂಕಿಅಂಶಗಳು ಈ ದುರಂತದ ಚಿತ್ರಣವನ್ನು ನೀಡುತ್ತದೆ. 2019ರ ಕೇಂದ್ರೀಯ ಅಂತರ್ಜಲ ಮಂಡಳಿಯ ವರದಿಯ ಪ್ರಕಾರ ಇಂದು ಭತ್ತದ ಗದ್ದೆಗಳಿರುವ ಪಂಜಾಬ್‌ಇದೇ ರೀತಿ ಅಂತರ್ಜಲವನ್ನು ಬಳಸುತ್ತಾ ಹೋದಲ್ಲಿ ಮುಂದಿನ 25 ವರ್ಷಗಳಲ್ಲಿ ಮರಭೂಮಿಯಾಗಿ ಬಿಡುತ್ತದೆ. ಈ ವರದಿ ಬರುವುದಕ್ಕೂ ಮುನ್ನವೇ ಹರ್ಬಂತ್‌ಸಿಂಗ್‌ತಾನು ಅನುಸರಿಸುತ್ತಿರುವ ವಿಧಾನಗಳು ಪರಿಸರಕ್ಕೆ ಹಾನಿಯುಂಟು ಮಾಡುತ್ತಿದೆ ಎಂದು ಅರಿತನು. ಅದೇ ರೀತಿ ರೈತರ ಪರಿಸ್ಥಿತಿ ಹದಗೆಡುತ್ತಿರುವುದನ್ನು ಕೂಡ ಅರ್ಥಮಾಡಿಕೊಂಡ. 2016 ರವರೆಗೆ ತನ್ನ ಜಮೀನಿನಲ್ಲಿ ಪರಿಸರ-ಪರ ಬದಲಾವಣೆಗಳನ್ನು ಕಾರ್ಯಗತಗೊಳಿಸಲು ಅವನಿಗೆ ಹಣ ಮತ್ತು ಸಂಪನ್ಮೂಲಗಳ ಕೊರತೆಯಿತ್ತು.

ಆ ವರ್ಷದಲ್ಲಿ, ರೈತರು ಸಾವಯವ ಕೃಷಿ ಅನುಸರಿಸಲು ಸಹಾಯ ಮಾಡುವ ಚಾರಿಟಬಲ್ ಟ್ರಸ್ಟ್ ಖೇತಿ ವಿರ್ಸಾಸತ್ ಮಿಷನ್ (ಕೆವಿಎಂ) ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಹರ್ಬಂತ್ ಮತ್ತು ಸತ್ನಾಮ್ ಭಾಗವಹಿಸಿದರು. ಅವರು ರೈತರೊಂದಿಗೆ ಸಂವಾದ ನಡೆಸಿದರು, ವಿಧಾನಗಳನ್ನು ಕಲಿತರು ಮತ್ತು ರಾಸಾಯನಿಕ ಗೊಬ್ಬರಗಳಿಗೆ ಪರಿಸರ ಸ್ನೇಹಿ ಪರ್ಯಾಯಗಳನ್ನು ಕಂಡುಕೊಂಡರು.

ಕೆವಿಎಂನ ಸಂಸ್ಥಾಪಕ ಸದಸ್ಯ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಉಮೇಂದ್ರ ದತ್ ಹೇಳುತ್ತಾರೆ, "ಏಕ ಬೆಳೆ ಪದ್ಧತಿಯು ಮಣ್ಣಿನ ಫಲವತ್ತತೆಯನ್ನು ಕಡಿಮೆ ಮಾಡುತ್ತದೆ. ರೈತರು ಇಳುವರಿಯನ್ನು ಹೆಚ್ಚಿಸಲು ರಾಸಾಯನಿಕ ಗೊಬ್ಬರಗಳನ್ನು ಬಳಸಲು ಒತ್ತಾಯಿಸುತ್ತದೆ.

**ಡ್ರ್ಯಾಗನ್ ಹಣ್ಣಿಗೆ ಕಡಿಮೆ ನೀರಿನ ಅಗತ್ಯವಿದೆ ಮತ್ತು ಇದನ್ನು ಶುಷ್ಕ ಪ್ರದೇಶದಲ್ಲಿ ಬೆಳೆಯಬಹುದು**



ಇದರಿಂದಾಗಿ ನೈಸರ್ಗಿಕ ಬೆಳೆ ಚಕ್ರಕ್ಕೆ ಅಡ್ಡಿಪಡಿಸುತ್ತದೆ. ಸಾಧ್ಯವಾದಷ್ಟು ಕಾಲೋಚಿತ ಬೆಳೆಗಳು ಅಥವಾ ತರಕಾರಿಗಳನ್ನು ಬೆಳೆಯಲು ಸಲಹೆ ನೀಡಲಾಗುತ್ತದೆ. ಇದು ಕೀಟಗಳ ದಾಳಿಯನ್ನು ಕಡಿಮೆ ಮಾಡುತ್ತದೆ." ಪ್ರತಿ ಕೀಟವನ್ನು ಕೊಲ್ಲುವ ಅವಶ್ಯಕತೆಯಿಲ್ಲ. ಅದು ಬೇರುಗಳಿಗೆ ಅತ್ಯಗತ್ಯವಾದ ಮಣ್ಣಿನ ಚಟುವಟಿಕೆಯನ್ನು ಉತ್ತೇಜಿಸುತ್ತದೆ ಎಂದು ಉಮೇಂದ್ರ ಒತ್ತಿಹೇಳುತ್ತಾರೆ. ಅಂತಿಮವಾಗಿ ರೈತ ಬೆಳೆಗಳ ನೈಸರ್ಗಿಕ ಚಕ್ರವನ್ನು ಅನುಸರಿಸಬೇಕು. ಅಂದರೆ ತೋಟವು ಪ್ರಕೃತಿಯ ಅನುಕರಣೆಯಾಗಿರಬೇಕು. ಹೊರ ಒಳಸುರಿಯುವಿಕೆಗಳಾದ ಗೊಬ್ಬರಗಳು, ಕೀಟನಾಶಕಗಳ ಬಳಕೆಯನ್ನು ಕಡಿಮೆಮಾಡಬೇಕು.

"ಹಸುಗಳು ಮತ್ತು ಕೋಳಿಗಳಂತಹ ಪ್ರಾಣಿಗಳು ನಿಮ್ಮ ಜಮೀನಿನಲ್ಲಿರಲಿ. ಏಕೆಂದರೆ ಅವು ಮಣ್ಣಿನ ಫಲವಂತಿಕೆ ಹೆಚ್ಚಿಸುವಲ್ಲಿ ಸಹಾಯ ಮಾಡುತ್ತವೆ. ಅವುಗಳ ತ್ಯಾಜ್ಯವು ಪೋಷಕಾಂಶ–ಭರಿತ ಗೊಬ್ಬರವಾಗಿ ಕಾರ್ಯನಿರ್ವಹಿಸುತ್ತದೆ. ಎಲೆಗಳಂತಹ ಕೃಷಿ ತ್ಯಾಜ್ಯವನ್ನು ಎಸೆಯುವ ಬದಲು ಮಣ್ಣಿನ ಮೇಲೆ ಹೊದಿಕೆಯಂತೆ (ಮಲ್ಚಿಂಗ್) ಬಳಸಿ. ಜಮೀನಿನಲ್ಲಿ ಹಕ್ಕಿಗಳಿರಲಿ. ಅವು ಗಿಡಕ್ಕೆ ಹಾನಿಯುಂಟುಮಾಡುವ ಕೀಟಗಳನ್ನು ತಿನ್ನುತ್ತವೆ. ಪ್ರತಿಯೊಂದು ಕೃಷಿ ಸಮಸ್ಯೆಗೆ ಉತ್ತರ ಪ್ರಕೃತಿಯಲ್ಲಿದೆ. ಅದನ್ನು ಕಂಡುಕೊಳ್ಳಬೇಕು," ಎಂದು ಉಮೇಂದ್ರ ಹೇಳುತ್ತಾರೆ.

"ಹಾನಿಕಾರಕ ಕೀಟನಾಶಕಗಳನ್ನು ಬಳಸುವುದು, ಅಂತರ್ಜಲವನ್ನು ಹೆಚ್ಚಾಗಿ ಬಳಸುವುದು ನಮಗೊಂದು ಚಟವಾಗಿದೆ. ಅನೇಕ ರೈತರು ಈ ವಿಷವರ್ತುಲದಿಂದ ಹೊರಬರಲು ಬಯಸುತ್ತಾರೆ ಆದರೆ ಯಾರೂ ಅಪಾಯಗಳನ್ನು ತೆಗೆದುಕೊಳ್ಳಲು ಬಯಸುವುದಿಲ್ಲ. ಇದರಿಂದ ಭೂಮಿಗೆ ಆಗುತ್ತಿರುವ ಹಾನಿಯ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಹಾಗಾಗಿ, ಸಾವಯವಕ್ಕೆ ಬದಲಾಗುವುದು ಸಾಧ್ಯ ಎನ್ನುವ ಭರವಸೆ ರೈತ ಸಮುದಾಯದಿಂದ ಸಿಕ್ಕಾಗ, ಅದನ್ನು ಬಳಸಿಕೊಂಡೆ "ಎಂದು ಹರ್ಬಂತ್ ಹೇಳುತ್ತಾರೆ.

**ಆಚರಣೆಯಲ್ಲಿ ಅಳವಡಿಸಿಕೊಳ್ಳುವುದು**

ಕಾರ್ಖಾನೆಯಲ್ಲಿ ಭಾಗವಹಿಸಿದ ನಂತರ 60 ವರ್ಷದ ರೈತ ತನ್ನ ವರ್ಷಗಳ ಅನುಭವ ಮತ್ತು ತಿಳಿವಳಿಕೆಯನ್ನು ಪಕ್ಕಕ್ಕಿಟ್ಟು ಡ್ರ್ಯಾಗನ್ ಹಣ್ಣು, ನಿಂಬೆ ಮತ್ತು ಶ್ರೀಗಂಧವನ್ನು ಬೆಳೆಯಲು ಮುಂದಾದರು.

ಈ ಭಿನ್ನ ರೀತಿಯ ಬೆಳೆಗಳನ್ನು ಆಯ್ಕೆ ಮಾಡುವ ಹಿಂದಿನ ಕಾರಣವನ್ನು ವಿವರಿಸುತ್ತಾ, ಸತ್ನಾಮ್ ಹೇಳುತ್ತಾರೆ "ಎಂಟು ಎಕರೆಯಲ್ಲಿ ನಾವು 1.55



**ಚೌಕ 1 : ಕೃಷಿ ವಿಧಾನ**

- 7×12 ಅಡಿ ಸಿಮೆಂಟ್ ಕಂಬವನ್ನು ಲಂಬವಾಗಿ ಹೂಳಲು ಮಣ್ಣಿನಲ್ಲಿ 2 ಅಡಿ ಆಳದ ಕಂದಕವನ್ನು ಅಗೆಯಿರಿ.
- ಅದಕ್ಕೊಂದು ಸಿಮೆಂಟ್ ರಿಂಗ್ ಹಾಕಿ
- ಪ್ರತಿ ಕಂಬದ ನಡುವೆ ಒಂದು ಅಡಿ ಅಂತರವನ್ನು ಕಾಯ್ದುಕೊಳ್ಳಿ ಇದರಿಂದ ಅದಕ್ಕೆ ಸೂರ್ಯನ ಬೆಳಕನ್ನು ಪಡೆಯಲು ಸಾಧ್ಯವಾಗುತ್ತದೆ.
- ಬಳ್ಳಿಯಂತಿರುವ ಸಸ್ಯವಾಗಿರುವುದರಿಂದ ನಾಲ್ಕು ಡ್ರ್ಯಾಗನ್ ಹಣ್ಣಿನ ಮರಗಳನ್ನು ಒಂದು ಕಂಬದ ಸುತ್ತ ಬೆಳೆಯಬಹುದು
- ಗಿಡಗಳಿಗೆ ಪೋಷಣೆಯನ್ನು ಒದಗಿಸಲು ಕಂಬದ ಒಳಭಾಗದಲ್ಲಿ ಮಣ್ಣು ಮತ್ತು ಜೀವಾಮೃತವನ್ನು (ಹಸುವಿನ ಸಗಣಿ ಮತ್ತು ಗಂಜಲದ ಮಿಶ್ರಣ) ತುಂಬಿಸಿ
- ಬೇರುಗಳಿಗೆ ನೇರವಾಗಿ ನೀರುಣಿಸಲು ಹನಿ ನೀರಾವರಿ ತಂತ್ರವನ್ನು ಬಳಸಿ. ಹರ್ಬಂಟ್ ನೀರಿನ ಪೈಪ್ ಮೂಲಕ ಕೀಟಗಳನ್ನು ದೂರವಿರಿಸಲು ದ್ರವ ಸಾವಯವ ಗೊಬ್ಬರವನ್ನು ಸೇರಿಸುತ್ತದೆ

ಎಕರೆಯನ್ನು ರಾಸಾಯನಿಕ ಮುಕ್ತ ಕೃಷಿಗಾಗಿ ಮೀಸಲಿಟ್ಟಿದ್ದೇವೆ. ಸಾಂಪ್ರದಾಯಿಕ ಬೆಳೆಗಳಾದ ಗೋಧಿ ಅಥವಾ ಅಕ್ಕಿಗೆ ಹೋಲಿಸಿದರೆ ಡ್ರ್ಯಾಗನ್ ಹಣ್ಣುಗಳು ಮತ್ತು ಶ್ರೀಗಂಧದ ಮರವು 90 ಪ್ರತಿಶತ ಕಡಿಮೆ ನೀರನ್ನು ಬಳಸುತ್ತದೆ. ಅವುಗಳ ನಿರ್ವಹಣೆ ಹಾಗೂ ಒಳಸುರಿಯುವಿಕೆಗಳ ವೆಚ್ಚ ಕಡಿಮೆ. ಆದರೆ ಅವು ಹೆಚ್ಚಿನ ಆದಾಯವನ್ನು ನೀಡುತ್ತವೆ."

ಕಚ್‌ನ ಡ್ರ್ಯಾಗನ್ ಹಣ್ಣಿನ ಕೃಷಿ ತಜ್ಞ ಹರೇಶ್ ಠಾಕರ್ ಅವರು ಸತ್ನಾಮ್ ಮಾತನ್ನು ಅನುಮೋದಿಸುತ್ತಾ "ಡ್ರ್ಯಾಗನ್ ಹಣ್ಣು ಉಷ್ಣವಲಯದ ಸಸ್ಯವಾಗಿದ್ದು ಇದರಲ್ಲಿ ಕ್ಯಾಲೊರಿ ಕಡಿಮೆಯಿರುತ್ತದೆ ಮತ್ತು ಆಂಟಿಆಕ್ಸಿಡೆಂಟ್‌ಗಳನ್ನು ಹೊಂದಿರುತ್ತದೆ. ಇದು ಬೆಳೆಯಲು ಹೆಚ್ಚು ನೀರಿನ ಅಗತ್ಯವಿಲ್ಲ ಮತ್ತು ಶುಷ್ಕ ಪ್ರದೇಶಗಳಲ್ಲಿ ಬೆಳೆಯಬಹುದು."
ನೀರಿನ ಅಗತ್ಯತೆಗಳು ಮತ್ತು ಕೃಷಿ ಒಳಹರಿವು ಕಡಿಮೆ ಇದ್ದರೂ, ಡ್ರ್ಯಾಗನ್ ಹಣ್ಣಿನ ಕೃಷಿಯು ಸರಿಯಾಗಿ ನಿರ್ವಹಿಸಿದರೆ ಇಳುವರಿ ವಿಷಯದಲ್ಲಿ ಅಸಾಧಾರಣ ಫಲಿತಾಂಶಗಳನ್ನು ಪಡೆಯಬಹುದು. ಉದಾಹರಣೆಗೆ, ಒಂದು ಎಕರೆ ಡ್ರ್ಯಾಗನ್ ಹಣ್ಣಿನ ಮರಗಳು ಸಿಂಗ್ ಕುಟುಂಬಕ್ಕೆ ಪ್ರತಿ ವರ್ಷ 40 ಕ್ವಿಂಟಾಲ್ (4000 ಕಿಲೋಗಳು) ನೀಡುತ್ತದೆ. ಒಂದು ಕಿಲೋಗೆ ರೂ 200 ವರೆಗೆ ಬೆಲೆಯಿರುತ್ತದೆ. "ನಾವು 2500 ಡ್ರ್ಯಾಗನ್ ಹಣ್ಣಿನ ಮರಗಳನ್ನು ಹೊಂದಿದ್ದೇವೆ. ಅದು ವಾರ್ಷಿಕವಾಗಿ ನಮಗೆ ಪ್ರತಿ ಎಕರೆಗೆ ಸುಮಾರು 8,00,000 ರೂಪಾಯಿಗಳನ್ನು ನೀಡುತ್ತದೆ. ಶ್ರೀಗಂಧದ ಮರಗಳು 15 ವರ್ಷಗಳ ನಂತರ ಕೈಗೆ ಬರುತ್ತದೆ. ಮರವೊಂದರ ಬೆಲೆ ರೂ. 3,00,000. ನಮ್ಮಲ್ಲಿ ಸುಮಾರು 200 ಶ್ರೀಗಂಧದ ಮರಗಳಿವೆ," ಎಂದು ಅವರು ಹೇಳುತ್ತಾರೆ.



ತಮ್ಮ ತೋಟದಲ್ಲಿ ಹರ್ಬಂತ್ ಸಿಂಗ್

**ಡ್ರ್ಯಾಗನ್ ಫ್ರೂಟ್ ಬೆಳೆಯಲು ವಿಯೆಟ್ನಾಂ ವಿಧಾನ**

ಕಳೆದ ದಶಕದಲ್ಲಿ, ಗುಜರಾತ್‌ನ ನೀರಿನ ಕೊರತೆಯ ಕಚ್ ಜಿಲ್ಲೆ ಸಾವಯವ ಡ್ರ್ಯಾಗನ್ ಫ್ರೂಟ್ ಕ್ರಾಂತಿಗೆ ಸಾಕ್ಷಿಯಾಗಿದೆ. ಅಲ್ಲಿ ನೂರಾರು ರೈತರು ಹೈಲೋಸೆರಿಯಸ್ ಉಂಡಟಸ್ ಅನ್ನು ಬೆಳೆಯುತ್ತಿದ್ದಾರೆ. ಇದು ಹೊರಗೆ ಗುಲಾಬಿ ಮತ್ತು ಬಿಳಿ ತಿರುಳು, ಕಪ್ಪು ಬೀಜಗಳನ್ನು ಹೊಂದಿರುತ್ತದೆ.

15 ಎಕರೆಯಲ್ಲಿ ಡ್ರ್ಯಾಗನ್ ಫ್ರೂಟ್ ಕೃಷಿ ಮಾಡುತ್ತಿರುವ ಕಚ್‌ನ ಸ್ನೇಹಿತ ವಿಶಾಲ್ ದೋಡಾ ಅವರನ್ನು ಸತ್ನಾಮ್ ಭೇಟಿಯಾದರು. ವಿಯೆಟ್ನಾಂ ವಿಧಾನದಲ್ಲಿ ಹಣ್ಣನ್ನು ಬೆಳೆಯುತ್ತಿರುವುದನ್ನು ನೋಡಿ ಪ್ರಭಾವಿತರಾದ ಸತ್ನಾಮ್ ಅದನ್ನು ಕಲಿತರು. ಅವರ ನರ್ಸರಿಯಿಂದ 500 ಸಸಿಗಳನ್ನು ಖರೀದಿಸಿದರು.
ಅವರು ತಮ್ಮ ತಂದೆಗೆ ಕಲಿಸಿದರು. ಇದಕ್ಕೆ ಅಗತ್ಯವಾದ ಕಂಬಗಳು, ನೀರಾವರಿ ಸೌಲಭ್ಯಗಳು, ಕಾರ್ಮಿಕರ ವೆಚ್ಚ ಮತ್ತು ಬೀಜಗಳು ಇವೆಲ್ಲವುಗಳಿಗಾಗಿ 4 ಲಕ್ಷ (ಪ್ರತಿ ಎಕರೆಗೆ) ಹೂಡಿಕೆ ಮಾಡಿದರು. ಹರ್ಬಂತ್ 1.25 ಎಕರೆಯಲ್ಲಿ 500 ಗಿಡಗಳನ್ನು ನೆಟ್ಟಿದ್ದಾರೆ, "ಮೊದಲ ವರ್ಷದಲ್ಲಿ, ಒಂದು ಗಿಡಕ್ಕೆ ಸುಮಾರು 4–5 ಕಿಲೋಗಳಷ್ಟು ಹಣ್ಣುಗಳನ್ನು ನೀಡುತ್ತದೆ ಮತ್ತು ನಂತರ ಐದನೇ ವರ್ಷದಲ್ಲಿ 20 ಕಿಲೋನಷ್ಟು ಹೆಚ್ಚಾಗುತ್ತದೆ". ಎರಡು ವರ್ಷದಲ್ಲಿ ಹೂಡಿಕೆ ಮಾಡಿದ್ದ ಹಣವನ್ನು ಮರಳಿ ಪಡೆದರು.

**ಶ್ರೀಗಂಧ ಮತ್ತು ನಿಂಬೆ ಬೆಳೆ**

ಕರೆಂಟ್ ಸೈನ್ಸ್ ಜರ್ನಲ್‌ನಲ್ಲಿ ಪ್ರಕಟವಾದ ಅಧ್ಯಯನದ ಪ್ರಕಾರ ಪರಾವಲಂಬಿ ಸಸ್ಯವಾಗಿರುವುದರಿಂದ, 'ಹೌಸ್ಟೋರಿಯಾ' ಎಂದು ಕರೆಯಲಾಗುವ ಶ್ರೀಗಂಧದ ಬೇರುಗಳು ತಮ್ಮ ಪೋಷಣೆಯನ್ನು ಇತರ ಆತಿಥೇಯ ಸಸ್ಯಗಳಿಂದ ಪಡೆಯುತ್ತವೆ. ಪ್ರತಿಯಾಗಿ ತಮ್ಮ ಅತಿಥೇಯರಿಗೆ ಪೋಷಕಾಂಶಗಳನ್ನು ಪೂರೈಸುತ್ತವೆ.

ಹಾಗಾಗಿ, ಹರ್ಬಂತ್ ಬೆಂಗಳೂರಿನಿಂದ ಸ್ಯಾಂಟಲಮ್ ಆಲ್ಬಂ ತಳಿಯನ್ನು ಖರೀದಿಸಿ ಅರ್ಧ ಎಕರೆಯಲ್ಲಿ 200 ಮರಗಳನ್ನು ನೆಟ್ಟರು. ಪ್ರತಿ ಮರದ ನಡುವೆ 12 ಅಡಿ ಅಂತರವಿದ್ದು ಅಲ್ಲಿ ನಿಂಬೆ ಕೃಷಿ ಮಾಡುತ್ತಿದ್ದಾರೆ.

"ಹೆಚ್ಚಿನ ವಾಣಿಜ್ಯ ಮೌಲ್ಯದ ಹೊರತಾಗಿ, ಶ್ರೀಗಂಧದ ಮರದ ಕೃಷಿಯಿಂದ ಹಲವು ಲಾಭಗಳಿವೆ. ಇದು ತನ್ನಷ್ಟಕ್ಕೆ ಬೆಳೆಯುವ ಮೊದಲ ಐದು ವರ್ಷಗಳಲ್ಲಿ ಅಲ್ಪಪ್ರಮಾಣದ ನೀರಿನ ಅಗತ್ಯವಿರುತ್ತದೆ. ಶ್ರೀಗಂಧವು ಕೊಯ್ಲಿಗೆ ಸಿದ್ಧವಾಗಲು 15 ವರ್ಷಗಳನ್ನು ತೆಗೆದುಕೊಳ್ಳುತ್ತದೆ.
ಶ್ರೀಗಂಧದ ಗಿಡವು ನಾಲ್ಕು ವರ್ಷಗಳ ನಂತರ ಬೀಜಗಳನ್ನು ನೀಡುತ್ತದೆ. ಪ್ರತಿ ಕಿಲೋಗೆ 1000 ರೂ.ವರೆಗೆ ಬೆಲೆಯಿದೆ. ಪಂಜಾಬ್‌ನಲ್ಲಿ ಶ್ರೀಗಂಧದ ಮರಗಳನ್ನು ನೆಡಲು ಯಾವುದೇ ಕಾನೂನು ನಿಷೇಧವಿಲ್ಲದಿದ್ದರೂ, ಅದನ್ನು ಕತ್ತರಿಸುವ ಸಮಯದಲ್ಲಿ ರೈತ ಸರ್ಕಾರದಿಂದ ಅನುಮತಿ ಪಡೆಯಬೇಕು," ಎಂದು ಸತ್ನಾಮ್ ವಿವರಿಸುತ್ತಾರೆ.

ಈ ಲೇಖನವು ಮೂಲ ಲೇಖನದ ಸಂಕ್ಷಿಪ್ತ ಭಾಗ. ಮೂಲ ಲೇಖವನ್ನು ಇಲ್ಲಿ ಓದಬಹುದು:
https://www.thebetterindia.com/237963/punjab-farmer-earns-lakhs-how-to-organic-farming-dragon-fruit-sandalwood-india-gop94/